# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



With Your support we reach
30,000+
HAMPI TIMES epaper readers
ನಿಮ್ಮ ಹೆಚ್ಚಿನ ಗ್ರಾಹಕರಿಗೆ ನಿಮ್ಮ ಉತ್ಪನ್ನ ಹಾಗೂ ಸೇವೆಯ ಮಾಹಿತಿ ತಲುಪಿಸಲು ಸಂಪರ್ಕಿಸಿ
PRINT & DIGITAL Advertisement
Valmiki Circle, Hospete-583201
9448633038
hampitimes@gmail.com
www.hampitimes.com
epaper.hampitimes.com





ಸಂಪುಟ:01 • ಸಂಚಿಕೆ:179 • ನೋಂದಣಿ ನಂ.:KARKAN27911 • ವಿಜಯನಗರ • 09.12.2023 • ಶನಿವಾರ • ಪುಟ:04 • ಬೆಲೆ:2
Volume:01 • Issue:179 • Reg.No:KARKAN27911 • VIJAYANAGARA • 09.12.2023 • Saturday • Page:04 • Rs:2


ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.


**PLACE YOUR ADVT.**
HOUSE RENT / SALE / LEASE, CHANGE OF NAME, OBITUARY, Public Notice & EVENT COVERAGE
Contact
9448633038
Near Valmiki Circle, HOSAPETE-583201
Email:hampitimes@gmail.com


# ‘ಸೋತು ಗೆದ್ದವಳು’ ಇನ್ನಿಲ್ಲ

## 600ಕ್ಕೂ ಅಧಿಕ ಚಿತ್ರಗಳಲ್ಲಿ ನಟನೆ । ಕನ್ನಡಿಗರ ಮನಗಳಲ್ಲಿ ಜೀವಂತ । ಗಣ್ಯರ ಸಂತಾಪ



**ಹಂಪಿ ಟೈಮ್ಸ್ ಹೊಸಪೇಟೆ**
ವಯೋಸಹಜದಿಂದ ಆರೋಗ್ಯದಲ್ಲಿ ಏರುಪೇರಾಗಿ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದ ಬೆಳ್ಳಿ ತೆರೆಯ ಹಿರಿಯ ನಟಿ ಲೀಲಾವತಿ(85) ಶುಕ್ರವಾರ ಕೊನೆಯುಸಿರೆಳೆದಿದ್ದಾರೆ.

ಕಳೆದ ಎರಡು ವಾರಗಳಿಂದ ವಯೋಸಹಜ ಕಾಯಿಲೆಯಿಂದ ಹಾಸಿಗೆ ಹಿಡಿದಿದ್ದ ಲೀಲಾವತಿ ಅವರು ಪುತ್ರ ಹಾಗೂ ಅಪಾರ ಅಭಿಮಾನಿಗಳನ್ನು ಬಿಟ್ಟು ಅಗಲಿದ್ದಾರೆ. ಕನ್ನಡದಲ್ಲಿ ಭಕ್ತ ಕುಂಬಾರ, ಮನ ಮೆಚ್ಚಿದ ಮಡದಿ ಸೇರಿದಂತೆ ಹಲವು ಸೂಪರ್ ಹಿಟ್ ಸಿನಿಮಾ ಮೂಲಕ ಅಭಿಮಾನಿಗಳನ್ನು ಸಂಪಾದಿಸಿದ್ದ ಲೀಲಾವತಿ ಅವರು ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದರು.ನೆಲಮಂಗಲದ ಬಳಿಯ ಅವರ ತೋಟದ ಮನೆಯಲ್ಲಿಯೇ ವೈದ್ಯರ ಸಲಹೆ ಮೇರೆಗೆ ಚಿಕಿತ್ಸೆಯನ್ನು ನೀಡಲಾಗುತ್ತಿತ್ತು. ಇತ್ತೀಚೆಗೆ ಸಿಎಂ ಸಿದ್ದರಾಮಯ್ಯ ಸೇರಿದಂತೆ ಅನೇಕ ನಟ, ನಟಿಯರು ಭೇಟಿ ನೀಡಿ ಆರೋಗ್ಯ ವಿಚಾರಿಸಿದ್ದರು. ಲೀಲಾವತಿ ದಕ್ಷಿಣ ಭಾರತದ ಜನಪ್ರಿಯ ನಟಿಯಾಗಿದ್ದರು. ಕನ್ನಡದಲ್ಲಿ ಅಷ್ಟೇ ಅಲ್ಲ ತಮಿಳು, ತೆಲುಗು ಮತ್ತು ಮಲಯಾಳಂ ಭಾಷೆ ಸೇರಿದಂತೆ ಒಟ್ಟು 600 ಚಿತ್ರಗಳಲ್ಲಿ ನಟಿಸಿದ್ದರು.

**ಲೀಲಾವತಿಗೆ ಒಲಿದ ‘ರಾಜ್’ :**
ಕರ್ನಾಟಕ ಸರ್ಕಾರ ಚಲನಚಿತ್ರರಂಗದ ಜೀವಮಾನ ಸಾಧನೆಗೆ ನೀಡುವ ಅತ್ಯುನ್ನತ ಪ್ರಶಸ್ತಿ ಡಾ. ರಾಜಕುಮಾರ್ ಪ್ರಶಸ್ತಿಯನ್ನು 1999–2000ದ ಸಾಲಿನಲ್ಲಿ ಲೀಲಾವತಿಗೆ ನೀಡಲಾಗಿದೆ. 2008ರಲ್ಲಿ ತುಮಕೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ ನೀಡಲಾಗಿತ್ತು. ಲೀಲಾವತಿ ಹುಟ್ಟಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿ. ನಾಟಕ, ರಂಗಭೂಮಿ ಬಗ್ಗೆ ಚಿಕ್ಕವಯಸ್ಸಿನಲ್ಲೇ ಆಸಕ್ತಿ ಹೊಂದಿದ್ದರು. ಲೀಲಾ ಅವರು ವೃತ್ತಿಜೀವನ ಆರಂಭಿಸಿದ್ದು ಮೈಸೂರಿನಲ್ಲಿ, ವೃತ್ತಿರಂಗಭೂಮಿಯಲ್ಲಿ ಸಂಪೂರ್ಣ ತೊಡಗಿಸಿಕೊಳ್ಳುವ ಮುನ್ನ ಕೆಲವೆಡೆ ಮನೆ ಕೆಲಸ ಮಾಡಿಕೊಂಡು ಜೀವನ ಸಾಗಿಸಿದ್ದರು. ಲೀಲಾವತಿ ಅವರ ಮಗ ವಿನೋದ್ ರಾಜ್ ಕನ್ನಡ ಚಿತ್ರರಂಗದ ಖ್ಯಾತ ನಟ. ಪ್ರಸ್ತುತ ತಾಯಿ–ಮಗ ಇಬ್ಬರೂ ತೋಟಗಾರಿಕೆ ಮತ್ತು ಕೃಷಿ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದರು.

## ಗಣ್ಯರ ಸಂತಾಪ

ಟ್ವೀಟ್ X ಟ್ವೀಟ್

ಕನ್ನಡ ಚಿತ್ರರಂಗದ ಹಿರಿಯ ನಟಿ ಲೀಲಾವತಿ ಅವರ ಅಗಲಿಕೆಯ ಸುದ್ದಿ ನೋವುಂಟುಮಾಡಿದೆ. ಕಳೆದ ವಾರವಷ್ಟೇ ಅವರು ಅನಾರೋಗ್ಯಕ್ಕೀಡಾದ ವಿಚಾರ ತಿಳಿದು ಅವರ ಮನೆಗೆ ಭೇಟಿನೀಡಿ ಆರೋಗ್ಯ ವಿಚಾರಿಸಿ ಪುತ್ರ ವಿನೋದ್ ರಾಜ್ ಅವರೊಂದಿಗೆ ಮಾತನಾಡಿದ್ದೆ.
ಹಲವು ದಶಕಗಳ ಕಾಲ ತಮ್ಮ ಮನೋಜ್ಞ ಅಭಿನಯದ ಮೂಲಕ ಪ್ರೇಕ್ಷಕರನ್ನು ರಂಜಿಸಿದ್ದ ಲೀಲಾವತಿ ಅವರು ಗುಣಮುಖರಾಗಿ ಇನ್ನಷ್ಟು ಕಾಲ ನಮ್ಮ ನಡುವೆ ಇರುತ್ತಾರೆಂಬ ನನ್ನ ನಂಬಿಕೆ ಹುಸಿಯಾಗಿದೆ. ಮೃತರ ಆತ್ಮಕ್ಕೆ ಚಿರಶಾಂತಿ ದೊರಕಲಿ, ಅವರ ಕುಟುಂಬ ವರ್ಗಕ್ಕೆ ಈ ದುಃಖವನ್ನು ಭರಿಸುವ ಶಕ್ತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ.
– **ಸಿದ್ದರಾಮಯ್ಯ** ಮುಖ್ಯಮಂತ್ರಿ, ಕರ್ನಾಟಕ

ಹಿರಿಯ ನಟಿ ಲೀಲಾವತಿ ಅವರ ಅಗಲಿಕೆಯ ಸುದ್ದಿ ಅತೀವ ದುಃಖ ಉಂಟುಮಾಡಿದೆ. ಇತ್ತೀಚೆಗಷ್ಟೇ ಅವರು ನೆಲಮಂಗಲ ಬಳಿಯ ಸೋಲದೇವನಹಳ್ಳಿಯಲ್ಲಿ ನಿರ್ಮಿಸಿದ್ದ ಪಶು ಆಸ್ಪತ್ರೆಯನ್ನು ಉದ್ಘಾಟಿಸಿದ್ದೆ. ಸಂಕಷ್ಟದಲ್ಲಿದ್ದರೂ ಸಮಾಜ ಸೇವೆ ಮಾಡಬೇಕೆನ್ನುವ ಅವರ ಕಳಕಳಿ ನನ್ನ ಹೃದಯ ಮುಟ್ಟಿತು. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಪುತ್ರ ವಿನೋದ್ ರಾಜ್ ಕುಟುಂಬವರ್ಗದವರು ಹಾಗೂ ಅಭಿಮಾನಿಗಳ ನೋವಿನಲ್ಲಿ ನಾನೂ ಕೂಡ ಭಾಗಿ.
– **ಡಿ.ಕೆ.ಶಿವಕುಮಾರ,** ಉಪ ಮುಖ್ಯಮಂತ್ರಿ

ಕನ್ನಡ ಚಿತ್ರರಂಗದ ಹಿರಿಯ ಕಲಾವಿದೆ ಲೀಲಾವತಿ ಅವರು ವಿಧಿವಶರಾದ ವಿಷಯ ತಿಳಿದು ಅತೀವ ದುಃಖವಾಗಿದೆ. ದಕ್ಷಿಣ ಭಾರತದ ಸುಮಾರು 600ಕ್ಕೂ ಅಧಿಕ ಚಿತ್ರಗಳಲ್ಲಿ ನಟಿಸಿ, ಚಿತ್ರರಂಗಕ್ಕೆ ಅಪಾರ ಸೇವೆ ಸಲ್ಲಿಸಿದ ಅವರ ಅಗಲಿಕೆಯಿಂದ ಕಲಾಪ್ರಪಂಚ ತನ್ನ ಮಾತೃಸದೃಶ ಕಲಾವಿದೆಯನ್ನು ಕಳೆದುಕೊಂಡಿದೆ. ಅವರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ, ಅವರ ಕುಟುಂಬ ಹಾಗೂ ಅಭಿಮಾನಿ ವರ್ಗದವರಲ್ಲಿ ಸಂತಾಪಗಳನ್ನು ಸಲ್ಲಿಸುತ್ತೇನೆ. ಓಂ ಶಾಂತಿ
– **ಬಿ.ಎಸ್.ಯಡಿಯೂರಪ್ಪ**
ಮಾಜಿ ಮುಖ್ಯಮಂತ್ರಿ

ಕನ್ನಡ ಚಿತ್ರರಂಗದ ಶ್ರೇಷ್ಠ ನಟಿಯರಲ್ಲಿ ಒಬ್ಬರು, ಬಹುಭಾಷಾ ಕಲಾವಿದರಾದ ಲೀಲಾವತಿ ಅವರ ನಿಧನದ ವಾರ್ತೆ ಕೇಳಿ ಬಹಳ ನೋವುಂಟಾಯಿತು. ನಾಯಕಿಯಾಗಿ ಮಾತ್ರವಲ್ಲದೆ, ಪೋಷಕ ಪಾತ್ರಗಳಿಗೂ ಜೀವ ತುಂಬಿ ಬೆಳ್ಳಿತೆರೆಯ ಮೇಲೆ ಅವುಗಳ ಹೆಜ್ಜೆಗುರುತುಗಳು ಮೂಡುವಂತೆ ಮಾಡಿದವರು ಅವರು. ಅಮ್ಮ, ಅಕ್ಕ, ಅತ್ತೆ ಸೇರಿ ಅನೇಕ ಪಾತ್ರಗಳಲ್ಲಿ ಪರಕಾಯ ಪ್ರವೇಶ ಮಾಡಿ ನಟಿಸುತ್ತಿದ್ದರು.
ಭಕ್ತ ಕುಂಬಾರ, ವೀರ ಕೇಸರಿ, ಭಾಗ್ಯದೇವತೆ, ಸೋತು ಗೆದ್ದವಳು, ನಂದಾದೀಪ, ವಿಧಿ ವಿಲಾಸ, ಸಂತ ತುಕಾರಾಂ, ರಣಧೀರ ಕಂಠೀರವ ಸೇರಿ ಅವರು ನಟಿಸಿದ್ದ ಅನೇಕ ಚಿತ್ರಗಳು ಕನ್ನಡಿಗರ ಮನೆ ಮನಗಳನ್ನು ತುಂಬಿರುತ್ತವೆ.
ಲೀಲಾವತಿ ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಅವರ ಪುತ್ರ ವಿನೋದ್ ರಾಜ್ ಅವರಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.
–**ಎಚ್.ಡಿ.ಕುಮಾರಸ್ವಾಮಿ** ಮಾಜಿ ಮುಖ್ಯಮಂತ್ರಿ



ಕನ್ನಡ ಚಿತ್ರರಂಗದ ಕಲಾ ಸರಸ್ವತಿ ಎಂದೇ ಖ್ಯಾತರಾಗಿದ್ದ ಹಿರಿಯ ನಟಿ ಲೀಲಾವತಿ ನಿಧನರಾಗಿರುವ ಸುದ್ದಿ ಕೇಳಿ ಮುನಸ್ಸಿಗೆ ದುಖವಾಯಿತು. ಅವರ ಅಗಲಿಕೆಯಿಂದ ಕನ್ನಡ ನಾಡು ಹಾಗೂ ಕಲಾರಂಗ ಒಬ್ಬ ಮನೆಯ ಹಿರಿಯರನ್ನು ಕಳೆದುಕೊಂಡು ಬಡವಾದಂತಾಗಿದೆ.
ಕನ್ನಡ ಚಿತ್ರರಂಗದ ಮೇರು ನಟರಾದ ಡಾ. ರಾಜಕುಮಾರ್ ಸೇರಿದಂತೆ ಎಲ್ಲ ದಿಗ್ಗಜ ನಟರೊಂದಿಗೆ ವಿಭಿನ್ನ ಪಾತ್ರಗಳನ್ನು ಮಾಡಿ ಎಲ್ಲರ ಮನೆ ಮಾತಾಗಿದ್ದರು.
ಅವರ ಪುತ್ರ ವಿನೋದ್ ರಾಜ್ ಅವರಿಗೆ ತಾಯಿಯ ಅಗಲಿಕೆಯ ದುಖವನ್ನು ಭರಿಸುವ ಶಕ್ತಿಯನ್ನು ಆ ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಓಂ ಶಾಂತಿಃ
– **ಬಸವರಾಜ ಬೊಮ್ಮಾಯಿ**
ಮಾಜಿ ಸಿಎಂ

**ಮೈಕ್ರೋ ನ್ಯೂಸ್**

## ಮತ್ಸ್ಯಸಂಪದ ಯೋಜನೆ: ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
ಮೀನುಗಾರಿಕೆ ಇಲಾಖೆಯಿಂದ 2023–24ನೇ ಸಾಲಿನಲ್ಲಿ ಫಲಾನುಭವಿ ಆಧಾರಿತ ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆಯ ವಿವಿಧ ಘಟಕಗಳಿಗೆ ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.
ಈ ಯೋಜನೆಯಡಿ ಹೊಸ ಪಾಲನೆ ಕೊಳಗಳ ನಿರ್ಮಾಣ (ನರ್ಸರಿ, ಮೀನುಮರಿ ಪಾಲನೆ ಕೊಳಗಳು), ಲವಣ, ಕ್ಷಾರಿಯ ಪ್ರದೇಶಗಳಿಗೆ ಹೊಸ ಕೊಳಗಳ ನಿರ್ಮಾಣ ಮತ್ತು ಹೂಡಿಕೆ ವೆಚ್ಚ, ಹೊಸ ಮೀನುಕೃಷಿ ಕೊಳಗಳ ನಿರ್ಮಾಣ ಮತ್ತು ಸಮಗ್ರ ಮೀನುಕೃಷಿ ಸ್ಕ್ಯಾಂಪಿ, ಪಂಗಾಸಿಯನ್, ತಿಲಾಪಿಯ, ಸಿಹಿ ನೀರಿನ ಜಲಕೃಷಿಗೆ ಹೂಡಿಕೆ ವೆಚ್ಚಗಳು, ಐಸ್ ಬಾಸ್ಕ್‌ದೊಂದಿಗೆ ಮೋಟಾರ್ ಸೈಕಲ್, ಮೀನು ಮಾರಾಟಕ್ಕಾಗಿ ಐಸ್ ಬಾಕ್ಸ್ ಹೊಂದಿರುವ ತ್ರಿಚಕ್ರ ವಾಹನ, ಅಲಂಕಾರಿಕ ಮೀನುಗಳ ಕಿಯೋಸ್ಕ್ ಸೇರಿದಂತೆ ಮೀನು ಕಿಯೋಸ್ಕ್ ನಿರ್ಮಾಣ, ಸಾಂಪ್ರಾದಾಯಕ ಮೀನುಗಾರರಿಗೆ ಎಫ್.ಆರ್.ಪಿ ಬೋಟ್ ಮತ್ತು ಬಲೆಗಳನ್ನು ಖರೀದಿಸಲು ಬ್ಯಾಕ್ಯಾರ್ಡ ಮಿನಿ ಆರ್.ಎ.ಎಸ್ ಹಾಗೂ ವಿವಿಧ ಘಟಕಗಳಿಗೆ ಸಹಾಯಧನ ನೀಡಲಾಗುತ್ತಿದೆ.
ಯೋಜನೆಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಹಾಗೂ ಮಹಿಳಾ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇ. 60ರಷ್ಟು ಹಾಗೂ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇ. 40ರಂತೆ ಸಹಾಯಧನವನ್ನು ನೀಡಲಾಗುವುದು. ಅರ್ಜಿ ಸಲ್ಲಿಸಲು ಡಿ.16 ಕೊನೆಯ ದಿನವಾಗಿದ್ದು, ಅರ್ಜಿಯನ್ನು ಸಂಬಂಧಿಸಿದ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ನಲ್ಲಿಸಬಹುದಾಗಿದೆ.
ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಉಪ ನಿರ್ದೇಶಕರು, ಬಳ್ಳಾರಿ, ವಿಜಯನಗರ ಜಿಲ್ಲೆ ಮೊ.ಸಂ: 9449593156, ಮೀನುಗಾರಿಕೆ ಸಹಾಯಕ ನಿರ್ದೇಶಕರಾದ ಹೊಸಪೇಟೆ ಮೊ.ಸಂ: 9620177588, ಹಡಗಲಿ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ಹಾಗೂ ಕೊಟ್ಟೂರು ಮೊ.ಸಂ: 8217725319, ಹರಪನಹಳ್ಳಿ ಮೊ.ಸಂ: 8951531330, ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಬಳ್ಳಾರಿ ಮೀನುಗಾರಿಕೆ ಉಪ ನಿರ್ದೇಶಕರು ತಿಳಿಸಿದ್ದಾರೆ.

## ಜಿಲ್ಲಾ ಕಾರಾಗೃಹ ಬಂಧಿಗಳಿಗೆ ಮನಃ ಪರಿವರ್ತನೆ ಕಾರ್ಯಕ್ರಮ

ಹಂಪಿ ಟೈಮ್ಸ್ ಕೊಪ್ಪಳ
ಜಿಲ್ಲಾ ಕಾರಾಗೃಹದಲ್ಲಿ ಶುಕ್ರವಾರಂದು ಪ್ರಿಸನರ್ಸ್ ಹೋಪ್ ಮಿನಿಸ್ಟರಿ ಆಫ್ ಇಂಡಿಯಾ ರವರ ವತಿಯಿಂದ ಕಾರಾಗೃಹದಲ್ಲಿರುವ ಬಂಧಿಗಳಿಗೆ ಮನಃ ಪರಿವರ್ತನೆ ಕುರಿತು ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿತ್ತು.
ಪ್ರಿಸನರ್ಸ್ ಹೋಪ್ ಮಿನಿಸ್ಟರಿ ಆಫ್ ಇಂಡಿ–ಯಾದ ಮುಖ್ಯಸ್ಥರಾದ ಗೋಪಿ, ರವಿ, ಹಾಗೂ ರವಿನಂದನ್‌ರವರು ಬಂಧಿಗಳಿಗೆ ಆತ್ಮಸ್ಥೈರ್ಯ ಹಾಗೂ ಕಷ್ಟದ ಸಮಯದಲ್ಲಿ ಧೈರ್ಯವಾಗಿರುವ ಕುರಿತು ವಿಸ್ತಾರವಾಗಿ ವಿವರಿಸಿದರು. ಹಾಗೂ ಬಂಧಿಗಳು ಕಾರಾಗೃಹದಿಂದ ಹೊರಬಂದ ಮೇಲೆ ಹೇಗೆ ಬದುಕಬಹುದು ಎಂಬುದರ ಬಗ್ಗೆ ಉದಾರಣೆ ಸಹಿತವಾಗಿ ತಿಳಿಸಿದರು.
ಕಾರ್ಯಕ್ರಮದಲ್ಲಿ ಕಾರಾಗೃಹ ಅಧೀಕ್ಷಕರಾದ ವಿಜಯಕುಮಾರ ಡಿ. ಚವ್ಹಾಣ, ಕಾರಾಗೃಹದ ಸಿಬ್ಬಂದಿ ಉಪಸ್ಥಿತರಿದ್ದರು.

## ರಾಷ್ಟ್ರ, ಅಂತರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಿ

### ರಾಜ್ಯ ಮಟ್ಟದ ಬಾಲ್ ಬ್ಯಾಡ್ಮಿಂಟನ್ ಕ್ರೀಡಾಕೂಟಗಳ ಉದ್ಘಾಟನೆ
### ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಫಾಲಾಕ್ಷ.ಟಿ. ಕರೆ

**ಹಂಪಿ ಟೈಮ್ಸ್ ಹೊಸಪೇಟೆ**
ಪದವಿ ಪೂರ್ವ ವಿದ್ಯಾರ್ಥಿಗಳು ಬಾಲ್ ಬ್ಯಾಡ್ಮಿಂಟನ್ ಪಂದ್ಯಗಳಲ್ಲಿ ಹೆಚ್ಚಿನ ಸಾಧನೆ ಮಾಡಿ ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ತಮ್ಮ ಕಾಲೇಜಿನ ಹಾಗೂ ಪದವಿ ಪೂರ್ವ ಇಲಾಖೆಗೆ ಹೆಸರನ್ನು ತರಬೇಕೆಂದು ಬಳ್ಳಾರಿ–ವಿಜಯನಗರ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಫಾಲಾಕ್ಷ.ಟಿ. ವಿದ್ಯಾರ್ಥಿಗಳಿಗೆ ಕರೆ ನೀಡಿದರು. >>4




## ಕ್ರೀಡೆಗಳು ಚೈತನ್ಯ ತುಂಬುತ್ತವೆ

### ಪಿಎಸ್ಐ ಗೀತಾಂಜಲಿ ಸಿಂಧೆ ಹೇಳಿಕೆ । ಇಂದು ಸಿಬಿಎಸ್ಇ ಶಾಲೆಯಲ್ಲಿ ಕ್ರೀಡಾ ದಿನಾಚರಣೆ ಉದ್ಘಾಟನೆ

**ಹಂಪಿ ಟೈಮ್ಸ್ ಕೊಟ್ಟೂರು**
ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆ ಶಿಕ್ಷಣದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೊಂದಾದ ಕ್ರೀಡೆಯಲ್ಲೂ ಪಾಲ್ಗೊಳ್ಳಬೇಕು ಎಂದು ಪಿಎಸ್ಐ ಗೀತಾಂಜಲಿ ಸಿಂಧೆ ಹೇಳಿದರು.
ಪಟ್ಟಣದ ಇಂದು ಸಿ.ಬಿ.ಎಸ್.ಇ ಶಾಲೆಯಲ್ಲಿ ಆಯೋಜಿಸಿದ ವಾರ್ಷಿಕ ಕ್ರೀಡಾ ದಿನದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಕ್ರೀಡೆ, ಸದೃಢ ದೇಹ ನಿರ್ಮಾಣ ಮಾಡುವುದಲ್ಲದೆ, ಕ್ರೀಡಾ ಆಸಕ್ತಿ ಹೆಚ್ಚಿನ ಜ್ಞಾನ ನೀಡುತ್ತೆ ಹಾಗಾಗಿ ಪ್ರತಿಯೊಬ್ಬರೂ ತಮ್ಮ ಓದುವ ವೇಳಾ ಪಟ್ಟಿಯಲ್ಲಿ ಕನಿಷ್ಠ 30 ನಿಮಿಷ ಆಟಕ್ಕೆ ಮೀಸಲಿಡಿ ನಿಮ್ಮ ಭವಿಷ್ಯ ಉಜ್ವಲಗೊಳ್ಳತ್ತೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.
ಇಂದು ಶಾಲೆಯ ಆಡಳಿತಾಧಿಕಾರಿ ಹೆಚ್.ಎನ್.ವೀರಭದ್ರಪ್ಪ ಮಾತನಾಡಿ, ಕೇವಲ ಶೈಕ್ಷಣಿಕ ಪ್ರಗತಿಯಿಂದ ಅಳೆಯುವ ಪೋಷಕರ ಮಾನದಂಡ ಬದಲಾಗಬೇಕು, ಕ್ರೀಡೆಗೆ ಹೆಚ್ಚಿನ ಪ್ರೋತ್ಸಹ ನೀಡುವ ಮೂಲಕ ಮಕ್ಕಳ ಯಶಸ್ಸನ್ನು ಕಂಡುಕೊಳ್ಳಬೇಕು ಎಂದರು.
ಕ್ರೀಡಾ ಜ್ಯೋತಿ ಬೆಳಗಿಸಲು ಕೊಟ್ಟೂರು ಪಿಎಸ್ಐ ಗೀತಾಂಜಲಿ ಸಿಂಧೆ ಅವರನ್ನು ವಿದ್ಯಾರ್ಥಿಗಳು ಆಕರ್ಷಕ ಪಥಸಂಚಲನ ಮೂಲಕ



ಕರೆದೊಯ್ದರು. ಕಾರ್ಯಕ್ರಮದಲ್ಲಿ ಪಿ.ಎಂ ವಾಗೀಶಯ್ಯ ಪದವಿ ಪ್ರಾಚಾರ್ಯರು, ಹೆಚ್.ಪವನ್ ಕುಮಾರ್ ಪಿಯು ಪ್ರಾಚಾರ್ಯರು, ಎ.ಚೇತನ್ ಕುಮಾರ್ ಪ್ರಾಂಶುಪಾಲರು, ಬಿ.ಬಸವರಾಜ್ ಮುಖ್ಯೋಪಾಧ್ಯಾಯರು ಇದ್ದರು. ವಾಣಿ.ಬಿ ಸ್ವಾಗತಿಸಿದರು, ಶಿಕ್ಷಕಿ ಪ್ರೇಮ ನಿರೂಪಿಸಿದರು, ವಿಜಯಲಕ್ಷ್ಮಿ ವಂದಿಸಿದರು.

## ವಕೀಲ ಹತ್ಯೆ ಖಂಡಿಸಿ ಪ್ರತಿಭಟನೆ

### ಮೌನ ಮೆರವಣಿಗೆ, ಕಲಾಪ ಬಹಿಷ್ಕಾರ



**ಹಂಪಿ ಟೈಮ್ಸ್ ಹೊಸಪೇಟೆ**
ಕಲ್ಬುರ್ಗಿ ವಕೀಲರೊಬ್ಬರನ್ನು ಬರ್ಬರವಾಗಿ ಹತ್ಯೆಗೈದಿರುವುದನ್ನು ಖಂಡಿಸಿ ಹೊಸಪೇಟೆ ತಾಲೂಕು ವಕೀಲರ ಸಂಘದಿಂದ ಶುಕ್ರವಾರ ಕೋರ್ಟ್ ಕಲಾಪ ಬಹಿಷ್ಕರಿಸಿ, ಮೌನ ಪ್ರತಿಭಟನೆ ನಡೆಸಿದರು.
ನಗರದ ಕೋರ್ಟ್ ಆವರಣದಿಂದ ಪುನೀತ್ ರಾಜ್ ಕುಮಾರ್ ಸರ್ಕಲ್, ಪುಣ್ಯಮೂರ್ತಿ ಸರ್ಕಲ್, ಟೌನ್ ಪೊಲೀಸ್ ಠಾಣೆ ಹಾಗೂ ಬಸ್ ನಿಲ್ದಾಣ ಮಾರ್ಗವಾಗಿ ಪುನಃ ಕೋ–ರ್ಟ್ಗೆ ತಲುಪಿ ಕೊನೆಗೊಂಡಿತು.
ಇದಕ್ಕೂ ಮುನ್ನ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ತಾಲೂಕು ವಕೀಲರ ಸಂಘದ ಕಾರ್ಯದರ್ಶಿ ಎ.ಕರುಣಾನಿಧಿ ಅವರು, ಇತ್ತೀಚೆಗೆ ವಕೀಲರ ಮೇಲೆ ಹಲ್ಲೆ, ದೌರ್ಜನ್ಯಗಳು ಹೆಚ್ಚುತ್ತಿದ್ದು, ನಿರ್ಭಯದಿಂದ ಕೆಲಸ ಮಾಡುವುದು ಕಷ್ಟಕರವಾಗಿದೆ. ನ್ಯಾಯವಾದಿಗಳಿಗೆ ಭದ್ರತೆ ಕಲ್ಪಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಇದೇ ಬೆಳಗಾವಿ ಅಧಿವೇಶನದಲ್ಲಿ ವಕೀಲರ ರಕ್ಷಣಾ ಕಾಯ್ದೆಯನ್ನು ಮಂಡಿಸಿ, ಜಾರಿಗೆ ತರಬೇಕು ಎಂದು ಆಗ್ರಹಿಸಿದರು.
ಸಂಘದ ಅಧ್ಯಕ್ಷ ಕೆ.ವಿ.ಬಸವರಾಜ, ಎಚ್.ಎಸ್.ದಿವಾಕರ, ಎಲ್.ಎಸ್. ಆನಂದ, ಮಕ್ಬೂಲ್ ಬಾಷಾ, ಡಿ.ವೀರನಗೌಡ, ತಾರಿಹಳ್ಳಿ ಹನುಮಂತಪ್ಪ, ಪಿ.ಶ್ರೀನಿವಾಸಮೂರ್ತಿ, ಪಿ.ವೆಂಕಟೇಶ, ಎ.ಮರಿಯಪ್ಪ, ರಮೇಶಗೌಡ, ಎಚ್.ಮಹೇಶ್, ವಕೀಲರಾದ ಯು.ಗೋಪಾಲ, ನೂರಬಾಷಾ, ಮಂಜುನಾಥ, ಎನ್.ಎಂ.ಸೌದಾಗರ್ ಮತ್ತಿತರರು ಪಾಲ್ಗೊಂಡಿದ್ದರು.

## ವಚನ ಅರಿವು

### ದಯವೇ ಧರ್ಮ

**ದಯವಿಲ್ಲದ ಧರ್ಮವದೇವುದಯ್ಯಾ?**
**ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ.**
**ದಯವೇ ಧರ್ಮದ ಮೂಲವಯ್ಯಾ,**
**ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.**

**– ಬಸವಣ್ಣ**

ಧರ್ಮ ಎಂದರೆ ಧಾರ್ಮಿಕ ಆಚರಣೆಗಳು; ದೇವರ ಪೂಜೆ ಪುನಸ್ಕಾರ ಮುಂತಾದ ಆಚರಣೆಗಳನ್ನು ಮಾಡುವುದು ಎಂಬ ಸೀಮಿತ ಅರ್ಥದ ಕಲ್ಪನೆಯಲ್ಲ. ಆದರೆ ನಿಜವಾದ ಧರ್ಮದ ಅರ್ಥ ದಯೆ ಎಂಬುದಾಗಿದೆ. 'ದಯವಿಲ್ಲದ ಧರ್ಮ'ವನ್ನು ಧರ್ಮ ಎನ್ನಲಾಗದು. ಪೂಜೆಯ ಹೆಸರಿನಲ್ಲಿ ಯಜ್ಞಯಾಗಾದಿಗಳನ್ನು ಮಾಡುತ್ತ ಪ್ರಾಣಿಗಳನ್ನು ಬಲಿ ಕೊಡುವ ಪದ್ಧತಿ ಅನಾದಿಕಾಲದಿಂದ ನಡೆಯುತ್ತ ಬಂದಿದೆ. ದಯವಿಲ್ಲದೆ ಜೀವಬಲಿ ಕೊಡುವುದನ್ನು ಈ ವಚನ ಪ್ರಶ್ನಿಸುತ್ತದೆ. 'ದಯವೇ ಧರ್ಮ' ಎಂದು ಬಸವಣ್ಣ ಧರ್ಮಕ್ಕೆ ಹೊಸ ವ್ಯಾಖ್ಯಾನ ಬರೆಯುತ್ತಾನೆ. ಮನುಷ್ಯ ಮನುಷ್ಯನ ಮಧ್ಯೆ ಕಂದಕವನ್ನು ಸೃಷ್ಟಿಸಿ ಧರ್ಮದ ಹೆಸರಿನಲ್ಲಿ ಶೋಷಣೆ ಮಾಡುವುದನ್ನು ವಿರೋಧಿಸಿ, ಮನುಷ್ಯ, ಪ್ರಾಣಿಗಳ ಮಧ್ಯೆ ಸಕಲ ಜೀವರಾಶಿಗಳ ಮೇಲೆ ದಯೆ, ಕರುಣೆ, ಪ್ರೀತಿ ಇರಬೇಕು ಎನ್ನುತ್ತದೆ ಈ ವಚನ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಅಂಬೇಡ್ಕರ್ ಅಭಿವೃದ್ಧಿ ನಿಗಮದ ಯೋಜನೆಗಳಡಿ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಕೊಪ್ಪಳ**
2023–24ನೇ ಸಾಲಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಹಾಗೂ ಇದರ ಅಧೀನದಲ್ಲಿ ಬರುವ ವಿವಿಧ ನಿಗಮಗಳಿಂದ ವಿವಿಧ ಯೋಜನೆಗಳ ಸೌಲಭ್ಯ ಪಡೆಯಲು ಅರ್ಜಿ ಸಲ್ಲಿಕೆ ಅವಧಿಯನ್ನು ಡಿಸೆಂಬರ್ 15 ರವರೆಗೆ ವಿಸ್ತರಿಸಲಾಗಿದೆ.

ನಿಗಮದಡಿ ಬರುವ ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮಗಳಿಂದ ಸ್ವಯಂ ಉದ್ಯೋಗ ನೇರ ಸಾಲ ಯೋಜನೆ, ಉದ್ಯಮಶೀಲತಾ ಅಭಿವೃದ್ಧಿ ಯೋಜನೆ, ಮೈಕ್ರೋ ಕ್ರೆಡಿಟ್ ಪ್ರೇರಣಾ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಭೂ ಒಡೆತನ ಯೋಜನೆಗಳಿಗೆ ಫಲಾನುಭವಿಗಳು ಅರ್ಜಿ ಸಲ್ಲಿಸಬಹುದು.

ಸೇವಾಸಿಂಧು ಪೋರ್ಟಲ್ ೪ಣಣಠಿ://ಜತಛಿಟಿಜುಣಾ. ಇಚಿಡಿಟಿಚಿಣಚಿಇಚಿ.ರಠತ.ಟಿ ನಲ್ಲಿ ಗ್ರಾಮ ಒನ್, ಕರ್ನಾಟಕ ಒನ್ ಕೇಂದ್ರ್ರಗಳ ಮೂಲಕ ಆನ್‌ಲೈನ್ ಅರ್ಜಿಯನ್ನು ಡಿ.15 ರೊಳಗೆ ಸಲ್ಲಿಸಬೇಕು ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com

# ನಾಳಿನ ನಾಯಕತ್ವಕ್ಕೆ ಮಾರ್ಗದರ್ಶಿ ಸೂತ್ರಗಳು



**ಡಾ.ಪರಮೇಶ್ವರಯ್ಯ ಸೊಪ್ಪಿಮಠ**
**ಶಿಕ್ಷಕರು**
soppi.mata@gmail.com



ಹಾಯ್ ಮಕ್ಕಳೇ ನೀವು ಬಾಲ್ಯದಲ್ಲಿಯೇ ನಾಯಕತ್ವ ಗುಣಗಳನ್ನು ಮೈ ಗೂಡಿಸಿಕೊಳ್ಳಬಹುದು. ನೀವು ಬೆಳೆದಂತೆಲ್ಲಾ ವ್ಯಕ್ತಿತ್ವ ಅರಳುತ್ತದೆ. ಅದರಿಂದ ಸರ್ವತೋಮುಖ ಬೆಳವಣಿಗೆ ಕಂಡು ನೀವು ಶ್ರೇಷ್ಠ ವ್ಯಕ್ತಿಯಾಗುವುದರಲ್ಲಿ ಅನುಮಾನವಿಲ್ಲ. ಪ್ರಸಿದ್ಧ ಇಂಗ್ಲೀಷ್ ಬರಹಗಾರನೊಬ್ಬ ಹೇಳುವ ಮಾತು "Management is doing things right; leadership is doing the right things " ಎಂಬುದು ಅಕ್ಷರ ಸಹ ಸತ್ಯ.

ಇಂದು ಜೀವಂತ ಇಲ್ಲದಿದ್ದರೂ ನಮ್ಮ ನಡುವೆ ಮಾದರಿಯಾಗಿ, ನೀವು ಪಠ್ಯಪುಸ್ತಕ ಓದುತ್ತಿರುವ ಶ್ರೇಷ್ಠ ನಾಯಕರುಗಳಾದ ಸಾಮ್ರಾಟ್ ಅಶೋಕ್, ದ ಗ್ರೇಟ್ ಅಲೆಗ್ಸಾಂಡರ್, ಬುದ್ಧ, ಬಸವಣ್ಣ, ನೇತಾಜಿ, ಗಾಂಧೀಜಿ, ಅಂಬೇಡ್ಕರ್. . . . . ಮುಂತಾದವರೆಲ್ಲರೂ ವಿಭಿನ್ನ ಹಾದಿಯನ್ನು ತುಳಿದು ನಾಯಕರಾದವರು. ಪ್ರಸ್ತುತ ನಮ್ಮೊಡನಿದ್ದು ಮಾರ್ಗದರ್ಶಕರಾಗಿರುವ ಅಬ್ದುಲ್ ಕಲಾಂ, ಅಣ್ಣಾ ಹಜಾರೆ. . .ಅವರು ತುಳಿದ ವಿಭಿನ್ನ ದಾರಿಯೇ ಅವರನ್ನು ವಿಶೇಷ ವ್ಯಕ್ತಿಯನ್ನಾಗಿ ನೋಡುವಂತೆ ಮಾಡಿದೆ. ಅವರೆಲ್ಲರೂ ಇಂದಿಗೂ ನಮಗೆ ಗುರಿ ಮುಟ್ಟಲು ಪ್ರೇರಣೆಯಾಗಿದ್ದಾರೆ. ಆ ರೀತಿ ನಾನು ಆಗಬೇಕೆಂಬ ಅಭಿಲಾಷೆ ನಿಮ್ಮಲ್ಲೂ ಇದ್ದೇ ಇರುತ್ತದೆ.

ಅದಕ್ಕೆ ನೀವು ಚಿಕ್ಕವರಾಗಿರುವಾಗಲೇ ನಾಯಕತ್ವ ಗುಣಕ್ಕೆ ಪೂರಕವಾದ ಲಕ್ಷಣಗಳನ್ನು ಮೈ ಗೂಡಿಸಿಕೊಳ್ಳಬೇಕು. ನಾಯಕತ್ವವು ಒಂದೇ ದಿನದಲ್ಲಿ ಅಥವಾ ಒಂದೇ ಗುಣದಿಂದ ಬರಲು ಸಾಧ್ಯವಿಲ್ಲ. ಅವುಗಳನ್ನು ಒಂದೊಂದಾಗಿ ಅನುಸರಿಸುತ್ತಾ ಸಾಗಿದಲ್ಲಿ ಅದು ಕಷ್ಟವೇನಲ್ಲ. ನಾಳಿನ ನಮ್ಮಗಳ ನಿರೀಕ್ಷೆಯನ್ನು ತುಂಬಬಲ್ಲ ನೀವು ಈಗಿನಿಂದಲೇ ನಾಯಕತ್ವಗುಣಗಳನ್ನು ಬೆಳೆಸಿಕೊಂಡಲ್ಲಿ ಸುಂದರ ಭವಿಷ್ಯವನ್ನು ಕಾಣಬಹುದು.

ಕೆಲವು ಮೂಲಭೂತ ಗುಣಗಳನ್ನು ಅಳವಡಿಸಿಕೊಂಡರೆ ನಾಯಕರಾಗುವುದು ಸುಲಭ. ನಾವುಗಳು ಗಮನಿಸಿದಂತೆ ಕೆಲವೇ ನಾಯಕರಿದ್ದಾರೆ. ಆದರೆ ಅವರನ್ನು ಅನುಸರಿಸುವ ಹಿಂಬಾಲಕರು ಅಸಂಖ್ಯಾತರಿದ್ದಾರೆ. ಅದಕ್ಕೆ ನನ್ನ ಸಲಹೆ ಏನೆಂದರೆ ನಾಯಕರಾಗುವತ್ತ ನೀವು ದೃಢ ಹೆಜ್ಜೆಗಳನ್ನಿಡಬೇಕೆ ಹೊರತು ಹಿಂಬಾಲಕರಾಗಿ ಅಲ್ಲ. ಈಗ ನಿಮ್ಮಲ್ಲಿ ಒಂದು ಪ್ರಶ್ನೆ ಮನದಲ್ಲಿ ಮೂಡಬಹುದು. ಕೆಲವೇ ಕೆಲವು ಜನ ಮಾತ್ರ ನಾಯಕರಾಗುವಲ್ಲಿ ಯಶ ಕಂಡರೆ ಬಹುತೇಕರು ವಿಫಲರಾಗಿರುವುದೇಕೆ?. ಎಂದಲ್ಲವೇ ?. ಇದಕ್ಕೆ ಸರಳ ಉತ್ತರವೆಂದರೆ ಯಶ ಕಂಡವರು ನಾಯಕರಾಗಲು ಅಗತ್ಯವಾದ ಗುಣಗಳಿಂದ ಎಂದೂ ಪಲಾಯನ ಮಾಡುವುದಿಲ್ಲ. ಕಳ್ಳದಾರಿ–ಅಡ್ಡ ದಾರಿಗಳತ್ತ ಮನಸ್ಸು ಮಾಡುವುದಿಲ್ಲ. ಅವರ ಯೋಚನೆ ಹಾಗೂ ಯೋಜನೆಗಳು ಒಂದು ರೀತಿ ಕ್ರಾಂತಿಕಾರಕವಾಗಿದ್ದು ಸಾಮಾನ್ಯರಿಗಿಂತ ಬೇರೆ ರೀತಿ ಯಾಗಿರುತ್ತವೆ. ಅವರು ದೂರದೃಷ್ಟಿಯಲ್ಲಿ ಯೋಚನೆ ಮಾಡುತ್ತಾ, ಕಠಿಣ ಶ್ರಮ ಹಾಕಿ ತಮ್ಮ ಹಾದಿಯಲ್ಲಿ ಮುನ್ನುಗ್ಗುವ ಗುಣ ಬೆಳೆಸಿಕೊಂಡಿರುತ್ತಾರೆ. ಇಂತಹ ಅಂಶಗಳನ್ನು ನೀವು ಪರಿಗಣಿಸಬೇಕು.

ನಮ್ಮಲ್ಲಿನ ಅನೇಕ ಪುಟಾಣಿಗಳಿಗೆ ನಾಯಕರಾಗಲು ಅಗತ್ಯವಾದ ಮತ್ತು ಮೂಲಭೂತವಾದ ಲಕ್ಷಣಗಳ ಪರಿಚಯವೇ ಇರುವುದಿಲ್ಲ. ಅದರಿಂದ ಅವರಲ್ಲಿ ಆ ಶಕ್ತಿ ಇದ್ದರೂ ಹಿಂದೆ ಬೀಳುತ್ತಿದ್ದಾರೆ. ಅವರ ಈ ಗೊಂದಲಕ್ಕೆ ತೆರೆ ಎಳೆಯುತ್ತಾ, ನಾಯಕರಾಗಲು ಪ್ರಮುಖವಾಗಿ ಯಾವ ಲಕ್ಷಣಗಳು ಅಗತ್ಯ ಎಂಬುದರ ಕುರಿತು ಕೆಲ ಅಂಶಗಣನ್ನು ನಿಮ್ಮ ಮುಂದಿಡುತ್ತಿದ್ದೇನೆ.

### ಧೈರ್ಯ :–

'ಧೈರ್ಯಂ ಸರ್ವತ್ರ ಸಾಧನಂ ' ಎಂಬಂತೆ ಯವುದೇ ಕೆಲಸ ಮಾಡಲು ಧೈರ್ಯವಿದ್ದರೆ ಆ ಕೆಲಸ ಅರ್ಧ ದಾರಿ ಮುಂದಕ್ಕೆ ಸಾಗಿದಂತೆ. ನಾಯಕರಾಗಬೇಕಾದರೆ ಹೆದರಿಕೆ– ಅಂಜಿಕೆಗಳಿಗೆ ಅಳುಕದೆ ಗುರಿಯತ್ತ ಮುನ್ನುಗ್ಗುವ ಛಾತಿ ಬೆಳೆಸಿಕೊಳ್ಳಬೇಕು. ನಾಯಕನಾಗುವವನಿಗೆ ಸಮಸ್ಯೆಗಳು ಒಂದರ ಮೇಲೊಂದರಂತೆ ಎದುರಾಗುತ್ತವೆ, ಸೋಲುಗಳು ಕಾಡುತ್ತವೆ. ಅವಕ್ಕೆ ಬೆನ್ನು ತೋರಿಸದೇ ಮುಂದುವರೆಯಲು ಧೈರ್ಯ ಅಗತ್ಯವಾಗಿದೆ. ಯಾರಲ್ಲಿ ಧೈರ್ಯವಿರುತ್ತದೋ ಅವರಲ್ಲಿ ತಮ್ಮ ಮೇಲೆ ಮತ್ತು ಕೆಲಸದ ಮೇಲೆ ಆತ್ಮವಿಶ್ವಾಸ ಬೆಳೆಯುತ್ತದೆ. ದ ಗ್ರೇಟ್ ಅಲೆಗ್ಸಾಂಡರ್ ಇದಕ್ಕೆ ಉತ್ತಮ ಉದಾಹರಣೆ ಅಲ್ಲವೇ!.

### ಬುದ್ಧಿ :–

ವಿದ್ಯೆ–ಬುದ್ಧಿಗಳೆರಡೂ ನಾಯಕನ ಕಣ್ಣುಗಳು. ಇವರೆಡರ ಸಿದ್ಧಿಯನ್ನು ಪಡೆದವನು ಜಗತ್ತನ್ನೇ ಗೆಲ್ಲಬಲ್ಲ. ಅದನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳುವ ಕೌಶಲ ನಮ್ಮ ಕೈಯಲ್ಲಿರುತ್ತದೆ. ಅವಕಾಶಗಳು ಬಂದಾಗ ಬುದ್ಧಿವಂತಿಕೆಯಿಂದ ಅವುಗಳನ್ನು ಬಳಸಿಕೊಳ್ಳುವ ಗುಣ ನಾಯಕ ಗಳಿಸಿಕೊಳ್ಳಬೇಕು. ಚಾಣಕ್ಯನು ತನ್ನ ಬುದ್ಧಿವಂತಿಕೆಯಿಂದ ನಂದ ಸಾಮ್ರಾಜ್ಯವನ್ನು ಕಿತ್ತೊಗೆದು ಜನಮನ್ನಣೆಯ ಮೌರ್ಯ ಸಾಮ್ರಾಜ್ಯವನ್ನು ನಿರ್ಮಿಸಿದ್ದು ಇತಿಹಾಸ. ಕಠಿಣ

### ಮಾತು (ಸಂವಹನ–ವಾಕ್ ಚಾತುರ್ಯ):–

'ಮಾತೆಂಬುದು ಜ್ಯೋತಿರ್ಲಿಂಗ ' ಎಂಬ ವಾಕ್ಯವು ಮಾತಿನ ಮಹತ್ವವನ್ನು ಸಾರುತ್ತದೆ. ನಾಯಕನಿಗೆ ಅಗತ್ಯವಾದ ಕೌಶಲವೆಂದರೆ ಸಂವಹನ. ಅವನ ಮಾತುಗಳು ಹಿಂಬಾಲಕರಿಗೆ ಉತ್ಸಾಹ ತುಂಬುವಂತಿರಬೇಕು. ಇತರರಿಗೆ ಪ್ರಿಯವಾಗುವುದರ ಜೊತೆಗೆ ಪ್ರಭಾವ ಬೀರುವಂತಿರಬೇಕು. ಮಾತಿನಂತೆ ನಡೆಯುವುದು ನಾಯಕನ ವ್ಯಕ್ತಿತ್ವಕ್ಕೆ ಶೋಭೆ ತರುತ್ತದೆ. ಮಾತು ಬಲ್ಲವನಿಗೆ ಜಗಳವಿಲ್ಲ ಎಂಬಂತೆ, ಉತ್ತಮ ವಾಕ್ ಚಾತುರ್ಯ ಬೆಳೆಸಿಕೊಂಡಲ್ಲಿ ಸಮಸ್ಯೆಗಳನ್ನು ಜಾಣತನದಿಂದ ದೂರಮಾಡುವ ಚಾಣಾಕ್ಷತನ ಕರಗತವಾಗುತ್ತದೆ. ಮಾತು ಹೇಗೆ ಸಾಮನ್ಯರನ್ನು ವಿಶೇಷ ವ್ಯಕ್ತಿಗಳನ್ನಾಗಿ ಮಾಡುತ್ತದೆ ಎಂಬುದಕ್ಕೆ ತೆನಾಲಿ ರಾಮಕೃಷ್ಣ, ಬೀರಬಲ್ ಕಥೆಗಳು ಉತ್ತಮ ಉದಾಹರಣೆ.

### ಬದ್ಧತೆ(ನಿಷ್ಠೆ–ಛಲ) :–

ಸತ್ಯ ಹರಿಶ್ಚಂದ್ರ ಸತ್ತರೂ ಸರಿ ಸತ್ಯವನ್ನು ಬಿಡುವುದಿಲ್ಲ ಎಂಬ ಬದ್ಧತೆ ಹೊಂದಿದ್ದರಿಂದ ಗಾಂಧೀಜಿಯವರಿಗೆ ಮಾದರಿಯಾದನು. ನಾಯಕರಾಗಲು ಬದ್ಧತೆ ರೂಢಿಸಿಕೊಳ್ಳಬೇಕು. ಇಂದಿನ ದಿನಗಳ ನಮ್ಮ ನಾಯಕರಲ್ಲಿ ನಿಷ್ಠೆಯ ಕೊರತೆಯಿಂದ ಅವರು ಬಹು ಬೇಗನೆ ಕೆಳಗೆ ಬೀಳುತ್ತಿದ್ದಾರೆ. ಒಂದು ವಿಷಯ–ವ್ಯಕ್ತಿ–ವಸ್ತು ಯಾವುದೇ ಇರಲಿ ಬದ್ಧತೆ ಇದ್ದಲ್ಲಿ ಅದರಿಂದ ಎಂದೂ ದೂರ ಸರಿಯಬಾರದು. ಅದಕ್ಕೆ ಆಯ್ಕೆ ಮಾಡಿಕೊಳ್ಳುವ ಮುಂಚೆ ಅದರ ಸಾಧಕ–ಬಾಧಕ ಗಮನಿಸಿರಬೇಕು. ನಿಷ್ಠೆ–ಛಲಗಳು ಕಠಿಣ ಹಾದಿಯಲ್ಲಿ ಮುನ್ನೆಡೆಸಿದರೂ, ಒಂದಲ್ಲ ಒಂದು ದಿನ ಫಲ ಕೊಡುವುದರಲ್ಲಿ ಅನುಮಾನವಿಲ್ಲ.

### ಪ್ರಾಮಾಣಿಕತೆ:–

ಇಂದಿನ ಬಹುತೇಕ ನಾಯಕರಲ್ಲಿ ಎದ್ದು ಕಾಣುತ್ತಿರುವ ಕೊರತೆ ಪ್ರಾಮಾಣಿಕತೆ. ಇಂದು ಹಗಲಿನಲ್ಲಿ ದೀಪ ಹಚ್ಚಿ ಹುಡುಕಿದರೂ ಪ್ರಾಮಾಣಿಕ ನಾಯಕರು ಸಿಗುವುದು ದುರ್ಲಭವಾಗುತ್ತಿದೆ. ಅನೇಕರು ಭ್ರಷ್ಟಾಚಾರ, ವ್ಯವಹಾರಗಳಿಗೆ ಸಿಲುಕಿ ತಮ್ಮ ಸ್ಥಾನವನ್ನು ಕಳೆದುಕೊಂಡಿದ್ದಾರೆ. ಪಾರದರ್ಶಕವಾಗಿ ಮತ್ತು ಪ್ರಾಮಾಣಿಕವಾಗಿ ಯಾರು ಜೀವಿಸುತ್ತಾರೋ ಅವರ ನಾಯಕತ್ವ ಹೆಚ್ಚಿನ ದಿನ ಬೆಳಗುತ್ತದೆ. ಲಾಲ್ ಬಹದ್ದೂರ ಶಾಸ್ತ್ರಿ ಅವರ ಪ್ರಾಮಾಣಿಕತೆ ನಮಗೆಲ್ಲ ಮಾದರಿಯಾಗಿದೆ.

### ಜವಾಬ್ದಾರಿ:–

ನಾಯಕನು ತನ್ನ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿಭಾಯಿಸಬೇಕು. ಕೆಲಸಾರಿ ಹೆಚ್ಚಿನ ಒತ್ತಡಗಳು ಉಂಟಾಗುತ್ತವೆ. ಕೋಪ ಮಾಡಿಕೊಳ್ಳದೆ, ತಾಳ್ಮೆಯಿಂದ ಜವಾಬ್ದಾರಿ ನಿಭಾಯಿಸಿದಲ್ಲಿ ಗೆಲುವು ಹತ್ತಿರವಾಗುತ್ತದೆ. ನಾಯಕ ತನ್ನ ಹಿಂಬಾಲಕರ ಶಕ್ತಿ ಅರಿತುಕೊಂಡು ಅವರಿಗೆ ತಕ್ಕನಾಗಿ ಜವಾಬ್ದಾರಿ ಹಂಚುವ ಗುಣ ರೂಢಿಸಿಕೊಳ್ಳಬೇಕು. ಅವರಿವರ ಮಾತು ಕೇಳಿ ತಪ್ಪು ಹಾದಿ ತುಳಿಯಬಾರದು. 'ಪ್ರತ್ಯಕ್ಷವಾಗಿ ಕಂಡರೂ ಪ್ರಾಮಾಣಿಕರಿಸಿ ನೋಡು' ಎಂಬ ಉಕ್ತಿಯಂತೆ ತನ್ನ ಸ್ವಂತ ಆಲೋಚನೆಯಿಂದ, ಸೃಜನಶೀಲತೆ ಬಳಸಿಕೊಂಡು, ಕ್ರಿಯಾಶೀಲವಾಗಿ ಮುಂದುವರೆದರೆ ನಾಯಕತ್ವ ಹೆಚ್ಚು ದಿನ ಬಾಳುತ್ತದೆ.

### ಶ್ರಮ :–

'ಕೈ ಕೆಸರಾದರೆ ಬಾಯಿ ಮೊಸರು' ಎಂಬ ಗಾದೆಯಂತೆ, ಯಾವ ಗುರಿಯನ್ನು ಹೊಂದಲಾಗಿದೆ ಅದರತ್ತ ಕಠಿಣ ಶ್ರಮ ಪಡದಿದ್ದಲ್ಲಿ ತಲುಪುವುದು ಅಸಾಧ್ಯ. ಗಾಂಧೀಜಿಯವರು ಸ್ವಾತಂತ್ರ ಹೋರಾಟದಲ್ಲಿ ಸತ್ಯಾಗ್ರಹವು ಹೆಚ್ಚು ಕಠಿಣವಾದದ್ದು ಎಂದು ಕೈಬಿಟ್ಟಿದ್ದರೆ, ಇಂದು ಪ್ರಪಂಚವೇ ಅವರತ್ತ ತಿರುಗಿ ನೋಡುವಂತಹ ಆದರ್ಶ ನಾಯಕರಾಗುತ್ತಿರಲಿಲ್ಲ. ನಾವು ಏನು ಬಿತ್ತುತ್ತೇವೆಯೋ ಅದನ್ನೆ ಪಡೆಯುತ್ತೇವೆ ಎಂಬಂತೆ ಎಷ್ಟು ಶ್ರಮ ಕಾಕುತ್ತವೆಯೋ ಅಷ್ಟು ಫಲವನ್ನು ಪಡೆಯುತ್ತೇವೆ. ಪ್ರಯತ್ನಕ್ಕೆ ತಕ್ಕಂತೆ ಪರಿಣಾಮ ಕಾಣಬಹುದು. ಹಾಗಾಗಿ ನಾಯಕನು ಅವಿರತವಾಗಿ ಶ್ರಮಜೀವಿಯಾಗಿರಬೇಕು. ಹಾದಿಯಲ್ಲಿ ಬರುವ ಎಡರು–ತೊಡರು, ಕಲ್ಲು–ಮುಳ್ಳುಗಳಿಗೆ ಅಂಜಿ ಹಿಂದಡಿ ಇಡದಂತೆ ಮುಂದಡಿ ಇಡಬೇಕು.

### ದೇಹಬಲ(ಆರೋಗ್ಯ):–

" health is lost, every thing is loss " ಎಂಬ ಮಾತಿನಂತೆ ಉತ್ತಮ ಆರೋಗ್ಯವಿದ್ದಲ್ಲಿ ಸಧೃಡ ದೇಹ–ಮನಸ್ಸಿರುತ್ತದೆ. ನಾಯಕರಾಗುವವರು ತಮ್ಮ ಆರೋಗ್ಯ ಹಾಗೂ ದೇಹದ ಸಾಮರ್ಥ್ಯದ ಸಂಪೂರ್ಣ ಅರಿವನ್ನು ಹೊಂದಿ, ಅದನ್ನು ವೃದ್ಧಿ ಪಡಿಸಿಕೊಳ್ಳುತ್ತಿರಬೇಕು. ಪ್ರಮುಖ ಘಟ್ಟ ಅಥವಾ ಸನ್ನಿವೇಷದಲ್ಲಿ ನಾಯಕನ ಆರೋಗ್ಯ ಕೈಕೊಟ್ಟರೆ ಅಲ್ಲಿಯವರೆಗೂ ಹಾಕಿದ ಶ್ರಮವೆಲ್ಲಾ ಹೊಳೆಯಲ್ಲಿ ಹುಣಸೇಹಣ್ಣು ತೊಳೆದಂತಾಗುತ್ತದೆ. ಅನೇಕ ನಾಯಕರು ಅನಾರೋಗ್ಯದಿಂದ ತಮ್ಮ ಅವಧಿಯನ್ನು ಪೂರ್ಣಗೊಳಿಸಲಾಗದೇ ಮೈ ಪರಚಿಕೊಂಡ ಘಟನೆಗಳನ್ನು ಮೆಲುಕು ಹಾಕಬಹುದು.

ನಾಯಕರಾಗಲು ಈ ಗುಣಗಳನ್ನು ಮೈಗೂಡಿಸಿಕೊಂಡರೆ ಸಾಕು. ಉಳಿದವು ತಾನೇ ತಾನಾಗಿ ಅಯಸ್ಕಾಂತಕ್ಕೆ ಕಬ್ಬಿಣದ ತುಂಡುಗಳು ಹಾಗೆ ನಿಮ್ಮನ್ನು ಮೆತ್ತಿಕೊಳ್ಳುತ್ತವೆ. ಅವುಗಳನ್ನು ನೀವು ಅನುಸರಿಸುತ್ತಾ ನಡೆಯಬೇಕು. ಉದಾಹರಣಗೆ ಹೇಳುವುದಾದರೆ ಸಮಯಪಾಲನೆ, ಸ್ವ ಆಲೋಚನೆ, ಸಿಂಹಾವಲೋಕನ, ಮುಂದಾಲೋಚನೆ, ತಂಡವನ್ನು ಮುನ್ನೆಡೆಸು ಜಾಣ್ಮೆ. . . . . ಮುಂತಾದವು ನಿಮ್ಮೊಳಗೆ ಮೇಳೈಸಿ ಸರ್ವ ರೀತಿಯಲ್ಲೂ ನಾಯಕರಾಗಿ ನೀವು ಅರಳಬಹುದು. ಮುದ್ದು ಮಕ್ಕಳೇ ನಿಮಗೆ ಈಗ ಸುರ್ವಣವಕಾಶದ ಹೆಬ್ಬಾಗಿಲು ತೆರೆದಿದೆ. ನೀವು ನಾಯಕರು ಅಥವಾ ಹಿಂಬಾಲಕರಾಗುವುದು ನಿಮ್ಮ ಕೈಯಲ್ಲಿದೆ. ಯೋಚಿಸಿ ಮುಂದಿನ ಭವಿಷ್ಯದ ನಾಯಕರಾಗುವುದು ನಿಮ್ಮ ಕೈಯಲ್ಲಿದೆ.

## ಸಿರಿಧಾನ್ಯ ಪಾಕ ಸ್ಪರ್ಧೆ ಭಾಗವಹಿಸಿ

**ಹಂಪಿ ಟೈಮ್ಸ್ ಹೊಸಪೇಟೆ**
ಜಿಲ್ಲಾ ಮಟ್ಟದ ಸಿರಿಧಾನ್ಯ ಪಾಕ ಸ್ಪರ್ಧೆಯಲ್ಲಿ ಜಿಲ್ಲೆಯ ಆಸಕ್ತರು ಭಾಗವಹಿಸಿಸುವಂತೆ ಜಂಟಿ ಕೃಷಿ ನಿರ್ದೇಶಕ ಶರಣಪ್ಪ ಮುದಗಲ್ ಅವರು ಮನವಿ ಮಾಡಿದ್ದಾರೆ.

ಅಂತರ್‌ರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯವ ಮೇಳ–2024ರ ಅಂಗವಾಗಿ ಬೆಂಗಳೂರಿನಲ್ಲಿ ನಡೆಯುವ ರಾಜ್ಯ ಮಟ್ಟದ ಸಿರಿಧಾನ್ಯ ಪಾಕ ಸ್ಪರ್ಧೆಯಲ್ಲಿ ವಿಜಯನಗರ ಜಿಲ್ಲೆಯಿಂದ ಸ್ಪರ್ಧಿಗಳನ್ನು ಆಯ್ಕೆ ಮಾಡಬೇಕಾಗಿದ್ದು, ಈ ಹಿನ್ನೆಲೆಯಲ್ಲಿ ಡಿ.13ರಂದು ನಗರದ ಹರಿಹರರಸ್ತೆಯ ವಿಜಯನಗರ ನ್ಯಾಷನಲ್ ಕಾಲೇಜು ಹಿಂಭಾಗದಲ್ಲಿರುವ (3ನೇ ಕ್ರಾಸ್) ಜಂಟಿ ಕೃಷಿ ನಿರ್ದೇಶಕರ ಕಾರ್ಯಾಲಯದಲ್ಲಿ ಏರ್ಪಡಿಸಲಾದ ಜಿಲ್ಲಾ ಮಟ್ಟದ "ಸಿರಿಧಾನ್ಯ ಪಾಕಸ್ಪರ್ಧೆ"ಯಲ್ಲಿ ಜಿಲ್ಲೆಯ ಎಲ್ಲಾ ಸಾರ್ವಜನಿಕರು ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ.

ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಪ್ರತಿ ಸ್ಪರ್ಧಿಗೆಒಂದೇ ತಿನಿಸುಗಳಿಗೆ (ಅಡುಗೆ) ಸಿಹಿ ಅಥವಾಖಾರ ಮಾಡಲು ಅವಕಾಶವಿರುತ್ತದೆ. ಸಿರಿಧಾನ್ಯ ಸಸ್ಯಹಾರಿ ತಿನಿಸುಗಳಿಗೆ ಮಾತ್ರ ಅವಕಾಶವಿದ್ದು, ಮನೆಯಲ್ಲಿಯೇ ತಯಾರಿಸಿದ ಸಿರಿಧಾನ್ಯ ತಿನಿಸು ಸ್ಪರ್ಧೆಯಲ್ಲಿ ಪ್ರದರ್ಶಿಸಬೇಕು. ತೀರ್ಪುಗಾರರ ನಿರ್ಧಾರವೇ ಅಂತಿಮವಾಗಿರುತ್ತದೆ.

ತಯಾರಿಸಿದ ತಿನಿಸುಗಳ ಪ್ರದರ್ಶನ, ಬಳಸಿದ ಸಾಮಗ್ರಿಗಳು, ತೊರಿಕೆ, ರುಚಿ, ಸುವಾಸನೆ, ಪೌಷ್ಟಿಕತೆಗಳ ಮೇಲೆ ಅಂತಿಮತೀರ್ಪು ಕೈಗೊಳ್ಳಲಾಗುವುದು. ಜಿಲ್ಲಾ ಮಟ್ಟದಲ್ಲಿಅತ್ಯುತ್ತಮಒಂದು ಸಿಹಿ ಹಾಗೂ ಖಾರ ತಿನಿಸನ್ನು ಆಯ್ಕೆ ಮಾಡಲಾಗುವುದು. ಸ್ಪರ್ಧಿಗಳು ನಿಗದಿ ಪಡಿಸಿದ ಸ್ಥಳದಲ್ಲಿ ಬೆಳಿಗ್ಗೆ 10 ಗಂಟೆಗೆ ಸರಿಯಾಗಿತಮ್ಮಅಡುಗೆ ಸಾಮಾಗ್ರಿಗಳೊಂದಿಗೆ ಹಾಜರಿರಬೇಕು. ಜಿಲ್ಲಾ ಮಟ್ಟಕ್ಕೆ ಪ್ರಥಮ ಬಹುಮಾನವಾಗಿಖಾರ ತಿನಿಸು ಅಥವಾ ಸಿಹಿ ತಿನಿಸಿಗೆ ತಲಾರೂ. 5000 ಬಹುಮಾನವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕೃಷಿ ನಿರ್ದೇಶಕಿ (ಕೇಂ) ಪ್ರಿಯಾಂಕಎಸ್. ಮೊ: 8277929661, ಸಹಾಯಕ ಕೃಷಿ ನಿರ್ದೇಶಕ (ವಿ.ತ) ಬಿ.ಮಹಮ್ಮದ ಹಾರೂನ್‌ರಷೀದ್ ಮೊ: 8277929662 ಸಂಖ್ಯೆಗೆ ಸಂಪರ್ಕಿಸಬಹುದು.

## ಇ–ಖಾತ ಸೇವೆ ಕೌಂಟರ್ ಪ್ರಾರಂಭ

**ಹಂಪಿ ಟೈಮ್ಸ್ ರಾಯಚೂರು,**
ರಾಯಚೂರಿನ ಜನತೆಯ ಒಂದೆ ಸೂರಿನಡಿ ಸೌಲಭ್ಯಗಳ ಅವಕಾಶ ಕಲ್ಪಿಸಲು, ಸರಳವಾಗಿ ಇ–ಖಾತ, ಮುಟೇಷನ್, ತಿದ್ದುಪಡಿ, ತೆರಿಗೆ ಪಾವತಿ ಸೇರಿದಂತೆ ವಿವಿಧ ಸೌಲಭ್ಯಕ್ಕಾಗಿ ಇ–ಖಾತ ಸಕಾಲ ಸೇವೆ (ಸಿಂಗಲ್ ವಿಂಡೋ ಸಿಸ್ಟಮ್) ಕೌಂಟರ್ ಒಪನ್ ಮಾಡಲಾಗುತ್ತಿದೆ ಎಂದು ಪೌರಾಯುಕ್ತರಾದ ಗುರುಸಿದ್ದಯ್ಯ ಹಿರೇಮಠ್ ಅವರು ತಿಳಿಸಿದ್ದಾರೆ. ಇ–ಖಾತ ಸಕಾಲ ಸೇವೆ ಸದುಪಯೋಗ ಪಡಿಸಿಕೊಳ್ಳಿ ತಿಳಿಸಿದ್ದಾರೆ




ಒಂದೆಸೂರಿನಡಿ ವಿವಿಧ ಸೇವೆಗಳು ನೀಡುವುದು ನಮ್ಮ ಉದ್ದೇಶ– ಗುರುಲಿಂಗಯ್ಯ

ನಗರಸಭೆಯಲ್ಲಿ ಡಿ. 9 ರಂದು ಬೆಳಗ್ಗ 11 ಗಂಟೆಗೆ ಇ–ಖಾತ ಸಕಾಲ ಸೇವೆ (ಸಿಂಗಲ್ ವಿಂಡೋ ಸಿಸ್ಟಮ್) ಕೌಂಟರ್ ಗೆ ಚಾಲನೆ ನೀಡಲಾಗುತ್ತಿದೆ. ಎಲ್ಲಾ ನಗರಸಭೆ ಸದಸ್ಯರು ಹಾಜರಿರಬೇಕೆಂದು ಮನವಿ ಮಾಡಿದ್ದಾರೆ.

ಇನ್ನುಮುಂದೆ ಜನರು ಈ ಮೇಲಿನ ಸೌಲಭ್ಯಗಳಿಗಾಗಿ ಕಚೇರಿಗೆ ಅಲೆದಾಡುವ ಹಾಗೂ ಮಧ್ಯವರ್ತಿಗಳೊಂದಿಗೆ ವ್ಯವಹರಿಸುವ ಅವಶ್ಯವಿಲ್ಲ ಜನರಿಗೆ ಅನುಕೂಲವಾಗಲಿ ಎಂದು ಈ ಕೌಂಟರ್ ಗಳನ್ನು ತೆರೆಯಲಾಗಿದೆ. ಎಲ್ಲಾ ವಾರ್ಡ್ ಗಳನ್ನೊಳಗೊಂಡಂತೆ ವಿಂಗಡಸಿ ನಾಲ್ಕು ವಾರ್ಡ್ ಗಳಿಗೆ ಒಂದರಂತೆ ಪ್ರತ್ಯೇಕವಾರು ಕೌಂಟರ್ ತೆರೆಯಲಾಗುತ್ತಿದೆ ಎಲ್ಲರು ಈ ಸಕಾಲ ಕೌಂಟರ್ ಸೇವೆಯನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಸೂಚಿಸಿದ್ದಾರೆ.

ಸಾರ್ವಜನಿಕರು ತಮ್ಮ ಸ್ವತ್ತಿನ ಮೂಲದಾಖಲೆಗಳೊಂದಿಗೆ ಈ ಕೌಂಟರ್ ನಲ್ಲಿ ಅರ್ಜಿ ಸಲ್ಲಿಸಿದರೆ. ಎಲ್ಲ ದಾಖಲೆಗಳು ಸರಿಯಿದ್ದರೆ ಕಾನೂನಾತ್ಮಕವಾಗಿ ಸಕಾಲದಲ್ಲಿ ಸೇವೆ ನೀಡಲಾಗುವುದು.

ಒಂದು ವೇಳೆ ಅವಶ್ಯಕ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ನಗರಸಭೆಯಿಂದ ತಮಗೆ ಹಿಂಬರಹ ನೀಡುತ್ತಾರೆ ನಂತರ ಹಿಂಬರಹದಲ್ಲಿ ಕೇಳಿದ ದಾಖಲೆಗಳನ್ನು ನೀಡಿದರೆ ಪುನಃ ಪರಿಶೀಲಿಸಿ ಸಕಾಲದಲ್ಲಿ ಸೇವೆ ಸಲ್ಲಿಸಲಾಗುವುದು. ಈ ಸಕಾಲ ಸೇವೆ ಸೌಲಭ್ಯವನ್ನು ರಾಯಚೂರಿನ ಜನರು ಸದುಪಯೋಗ ಪಡಿಸಿಕೊಳ್ಳಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾತೃ ಭಾಷೆ ನಾಡಿನ ಅಸ್ತಿತ್ವ

"ಕನ್ನಡ ಎನೆ ಕುಣಿದಾಡಿವುದೆನ್ನೆದೆ,
ಕನ್ನಡ ಎನೆ ಕಿವಿ ನಿಮಿರುವುದು
ಕನ್ನಡ ಕನ್ನಡ ಹಾ! ಸವಿಗನ್ನಡ"
ಕುವೆಂಪು ಅವರ ಈ ಸಾಲು, ನಮ್ಮಕನ್ನಡ ಕೇಳುವ ರೋಮಾಂಚನ!! ಅಬ್ಬಾ!!! ಅನ್ನುವ ಉದ್ಘೋಷಕ ಮಾತಿನ ಸಾಲುಗಳೇ ಆಗಿವೆ.

ಮಾತೃಭಾಷೆಯೇ ಅಂಥಹುದು. ಮನುಜ ಹುಟ್ಟಿದಾರಭ್ಯ ತೊದಲುನುಡಿಯ ಜೊತೆಗೆ, ಕಲಿತ ಮೊದಲ ಭಾಷೆ. ತಾನೇ ತಾನಾಗಿ ಬಾಯಿಂದ ಹೊರಡುವ ಭಾಷೆ ಮಾತೃಭಾಷೆ. ಯಾರೂ ಕಲಿಸಬೇಕಿಲ್ಲದ, ಭಾಷಾ ಮಾಧ್ಯಮವೇ "ಮಾತೃಭಾಷೆ".

ಫೆಬ್ರವರಿ21 "ವಿಶ್ವಮಾತೃಭಾಷಾ ದಿನ". ನಮ್ಮ ನರನಾಡಿಗಳಲ್ಲೇ ಬೆರತಿರುವ ಮಾತೃಭಾಷೆಗೆ ದಿನವೂ ದಿನಾಚರಣೆಯೇ. ಈಗಿನ ವಿದ್ಯಾಮಾನಗಳನ್ನು ಗಮನಿಸಿದರೆ, ನಮ್ಮ ಮಾತೃಭಾಷೆಯೇ ಇದು '...' ಎಂದು ನೆನಪಿಸಿಕೊಳ್ಳಲಾದರೂ "ವಿಶ್ವ ಮಾತೃಭಾಷಾ ದಿನ"ವನ್ನು ನೆನಪಿನಿಂದ ಸಂಭ್ರಮಾಚಣೆಯಲ್ಲಿ ತೊಡಗಿಸಿಕೊಳ್ಳುವ ಸಂಪ್ರದಾಯ ಬಂದಿದೆ.

ನಮ್ಮ ಮಾತೃ ಭಾಷೆಯ ಕನ್ನಡದ ಹೆಮ್ಮೆಯೊಂದಿಗೆ, ಮಾತೃಭಾಷೆಗೂ ಒಂದು ದಿನವನ್ನು ಮೀಸಲಿಟ್ಟ ಕಾರಣ ಹುಡುಕಿದರೆ, ಸಿಕ್ಕಿದ್ದೇ, 'ಸ್ವತಂತ್ರ ಬಾಂಗ್ಲಾದಲ್ಲಿ ಉರ್ದುವನ್ನು ರಾಷ್ಟ್ರ ಭಾಷೆಯನ್ನಾಗಿಸಿದಕ್ಕೆ ವಿರೋದಿಸಿ, 1952ರಲ್ಲಿ ಢಾಕಾ ವಿ.ವಿ.ಯ ವಿದ್ಯಾರ್ಥಿಗಳಿಂದ, ಪ್ರತಿಭಟನೆ ನಡೆಯಿತು. ನಂತರ ಪ್ರತಿಭಟನೆಯು ಬಂಗಾಳಿಯನ್ನೇ ರಾಷ್ಟ್ರಬಾಷೆಯಾನ್ನಾಗಿಸಲು ಸಫಲವಾಯಿತು.

ನಂತರ 1999ರಲ್ಲಿರಲ್ಲಿ, 'ಯುನೆಸ್ಕೋ' ವಿಶ್ವ ಮಾತೃಭಾಷಾದಿನ' ವನ್ನು ಘೋಷಿಸಿತು. ಪ್ರತಿವರ್ಷ ನಮ್ಮ ಮಾತೃಭಾಷೆಗೆ ದಿನಾಚರಣೆಯ ಸಂಭ್ರಮವನ್ನು, ಅದರ ಹಿನ್ನೆಲೆ, ಗರಿಮೆ, ಹಿರಿಮೆಯನ್ನು ತಿಳಿದುಕೊಳ್ಳಲು ಸಹಾಯಕವಾಯಿತು.

ನಮ್ಮ ಮಾತೃಭಾಷೆ ಕನ್ನಡ ಹೇಗೆಂದರೆ,
" ಸುಲಿದ ಬಾಳೆಯಹಣ್ಣಿನಂದದಿ,
ಕಳೆದ ಸಿಗುರಿನ ಕಬ್ಬಿನಂದದಿ
ಅಳಿದ ಸುಖೋಷ್ಣ ಹಾಲಿನಂದದಿ
ಸುಲಭವಾಗಿರ್ಪ,
ಲಲಿತವ ಕನ್ನಡ ನುಡಿಯಲ್ಲಿ "
ಎಂದು, ಮಹಾಲಿಂಗ ರಂಗರು ಹೇಳಿರುವ ನಮ್ಮ ಕನ್ನಡ, ಎಲ್ಲರಿಗೂ ಒಗ್ಗುವ ಸುಖೋಷ್ಣ ಹಾಲಿನಂತೆ ಹಿತವಾಗಿದೆ. ಇನ್ನು ಮಾತೃಭೂಮಿಯ ವಿಸ್ತಾರತೆಯನ್ನು ' ಕವಿರಾಜಮಾರ್ಗಕಾರ 'ಶ್ರೀವಿಜಯ "ಕಾವೇರಿಯಿಂದ ಮಾ ಗೋದಾವರಿ ವರಮಿರ್ದ ನಾಡದಾ ಕನ್ನಡದೋಳ್ " ಎಂದು ನಮ್ಮ ನಾಡಿನ ವಿಸ್ತೃತತೆ, ವಿಸ್ತಾರದ ಬಗ್ಗೆ ತಿಳಿಸಿದ್ದಾರೆ.

ಮಾತೃಭಾಷೆಯೊಂದಿಗೆ ನಾಡಿನ ವೈವಿಧ್ಯಮಯ ಸಂಸ್ಕೃತಿ, ಸಮುದ್ರದಂತಿರುವ ಸಾಹಿತ್ಯ. ನಮ್ಮ ಕನ್ನಡಿಗರ ಜನಪದ, ಹಸೆಯಂತಹ ಪ್ರಾಚೀನ ಕಲೆಯೊಂದಿಗೆ ಆಧುನಿಕ ಕಲೆ, ಸಂಗೀತ, ಈ ಎಲ್ಲಾ ಸಾಂಸ್ಕೃತಿಕ ವೈಭವವೂ, ನಾಡು-ನುಡಿಯೊಂದಿಗೆ ಸುಲಭವಾಗಿ ಸಮ್ಮಿಳಿತಗೊಂಡು ಪಸರಿಸಿ, ಜನಮನವನ್ನು ಸುಲಭವಾಗಿ ತಲುಪುತ್ತದೆ, ಎಂಬುದೇ ನನ್ನ ಅನಿಸಿಕೆ. ಕನ್ನಡಿಗರೆಂದರೆ ಸ್ವಭಾವತಃ ಮೃದು. ಹಾಲಿನಂತಹ ಮನಸ್ಸುಳ್ಳವರು. ಎಲ್ಲರೊಂದಿಗೆ ಹೊಂದಿಕೊಳ್ಳುವವರು. ಡಿ.ವಿ.ಜಿ.ಅವರ "ಎಲ್ಲರೊಳಗೊಂದಾಗೋ ಮಂಕುತಿಮ್ಮ", ಎನ್ನುವುದಕ್ಕೆ ಸಾಕಾರ ಸ್ವರೂಪರೇ ನಾವು ಕನ್ನಡಿಗರು.

ಆದ್ದರಿಂದಲೇ ಅತಿಹೆಚ್ಚಿನ ಪರಭಾಷಿಕರು, ಕನ್ನಡನಾಡಿನಲ್ಲಿ ನೆಲೆನಿಂತಿದ್ದಾರೆ. ನಾವು ಕನ್ನಡಿಗರು, ನಮ್ಮ ನಾಡಿನಲ್ಲಿರುವ ಪರಭಾಷಿಕರ ಜೊತೆ, ಅವರ ಭಾಷೆಯಲ್ಲೇ ಮಾತಾನಾಡಿ ಅಭಿಮಾನವನ್ನು ಕಡಿತ ಮಾಡುತ್ತದ್ದೀವಾ!? ಎನ್ನುವ ಸಂದೇಹ ಕೆಲವು ಸಲ ಮನದಲ್ಲಿ ಮೂಡುವಂತಾಗುವುದು. ಪರ ರಾಜ್ಯದಲ್ಲಿದ್ದಾಗ ಅನಿವಾರ್ಯವೇ ಆಗಿದ್ದಾಗ, ಆ ರಾಜ್ಯದ ಅಧಿಕೃತ ಭಾಷೆ ಕಲಿತು, ವ್ಯವಹರಿಸುವುದೇನೋ ಸರಿ. ಆದರೆ ಪರರಾಜ್ಯದವರು ಕನ್ನಡನಾಡಿನಲ್ಲಿದ್ದಾಗ, ಅನಿವಾರ್ಯತೆ ಇಲ್ಲದಿದ್ದರೂ, ಅವರ ಭಾಷೆಯಲ್ಲಿ ಸಂವಹನಕ್ಕೆ ತೊಡಗುವುದು ಅತಿರೇಕವೇ ಆಗಿದೆ ಎಂದರೆ ಅತಿಶಯವಲ್ಲ.

ಪರ ಭಾಷೆ ಕಲಿಯಬೇಕು ನಿಜ. ಅನಿವಾರ್ಯತೆ ಇರುವಲ್ಲಿ ಬಳಸೋಣ ತಪ್ಪಿಲ್ಲ. ಆದರೆ ನಮ್ಮ ಮಾತೃಭಾಷೆಯನ್ನು ನಾವೇ ಕಡೆಗಾಣಿವಂತಾಗಬಾರದು. ದೈನಂದಿನ ಬದುಕಿಗೆ, ಬದುಕಿನ ರೀತಿಗೆ, ಮಕ್ಕಳಿಗೆ ಕಥೆ ಹೇಳಿ ಊಟ ಮಾಡಿಸುವಾಗ, ಬರುವುದೇ ಮಾತೃಭಾಷೆ. ಕನ್ನಡ. ನಮ್ಮ ನಾಡುನುಡಿಯ ಬಗೆಗೆ ಅಭಿಮಾನ ಉಕ್ಕುವುದು, ಹೊರದೇಶದಲ್ಲಿದ್ದಾಗ, ಅಥವಾ ಪರಭಾಷಿಕರ ನಡುವಿದ್ದಾಗ. ನಮಗೆ ಮಾತೃಭಾಷೆ ಸ್ವಲ್ಪ ಕಿವಿಗೆ ಬಿದ್ದರೂ ಸಾಕು, ರಸ ಋಷಿ ಕುವೆಂಪು ಅವರು ಹೇಳುವಂತೆ, "ಕನ್ನಡ ಎನೆ ಕಿವಿ ನಿಮಿರುವುದು" ಎನ್ನುವಂತೆ, ಥಟ್ಟನೇ ಮೈ ಮರೆತು ಕನ್ನಡಿಗರನ್ನು ಹುಡುಕುವಂತಾಗುತ್ತದೆ. ಮನಸ್ಸಿನ ಭಾವನೆಗಳನ್ನು ಹೊರಹಾಕಲ, ಮಾತೃ ಭಾಷೆಗಿಂತ ಮಿಗಿಲು ಯಾವುದಿದೆ!? ಆಂಗ್ಲ ಅಥವಾ ಬೇರೆ ಭಾಷೆಯಲ್ಲ, ಎಷ್ಟೇ ಪರಿಣಿತರಿದ್ದರೂ ನಮ್ಮ ಸಿಟ್ಟು-ಸೆಡವು, ಕೋಪತಾಪ, ಸಂತಸ, ಆಶ್ಚರ್ಯ ಜೊತೆಗೆ ಬೈಯವುದೂ ಸಹ, ಎಲ್ಲವನ್ನೂ ಮನಸೋ ಇಚ್ಛೆ ಪೂರ್ತಿ ಹೊರಹಾಕುವುದು ಮಾತೃಭಾಷೆಯಿಂದಲೇ. ಆಗ ಮಾತ್ರ ಸಮಾಧಾನಕರ ಸ್ಥಿತಿ. ಇಲ್ಲವಾದರೆ ತೋರ್ಪಡಿಕೆ ಎಂತಾಗುವುದು ನಿಜ.

ಶಾಸ್ತ್ರೀಯ ಭಾಷೆಯಾಗಿ ಕನ್ನಡ:-
ಭಾಷೆಯೆಂಬುದು ಆದಿಮಾನವರ ಕಾಲದಿಂದ, ಸನ್ನೆಯ ಮೂಲಕ ಆರಂಭವಾಗಿ ವಿಕಸುತ್ತಲೇ ಇದ್ದು, ಅಂದಿನಿಂದಲೂ ವಿಶ್ವದಾದ್ಯಂತ ಇರುವ ಸಂವಹನ ಮಾಧ್ಯಮವಾಗಿದೆ. ಪ್ರತಿ 30 ರಿಂದ40 ಕಿ.ಮಿ.ವರೆಗೊಮ್ಮೆ, ಭಾಷೆ ಬದಲಾಗುತ್ತದೆಂದು ನಮ್ಮ ಗುರುಗಳು ಹೇಳುತ್ತಿದ್ದರು. ಆದರೆ ಪ್ರತಿ ಊರಿಗೂ ಸಹ, ಭಾಷಾ ವೈವಿದ್ಯತೆ ಇದೆ ಎಂಬುದು ನನ್ನ ಅನಿಸಿಕೆ. ನಮ್ಮ ಕನ್ನಡ ಸಹ ಅನೇಕ ಘಟ್ಟಗಳಾದ, ಪೂರ್ವದ ಹಳೆಗನ್ನಡ, ಪಂಪಪೂರ್ವಯುಗ ಕನ್ನಡ, ಪಂಪಯುಗ ಕನ್ನಡ, ಹಳೆಗನ್ನಡ , ನಡುಗನ್ನಡ, ಆದುನಿಕ ಕನ್ನಡ ಎಂಬುದಾಗಿ ವಿಂಗಡನೆ ಮಾಡಿದ್ದಾರೆ ಭಾಷಾ ಪಂಡಿತರು .

ಇದನ್ನು ದಾಟಿ ಈಗ ಆಧುನಿಕ ಕನ್ನಡ ಕಾಲಘಟ್ಟದಲ್ಲಿ
1.ಹಳೆ ಮೈಸೂರು ಪ್ರಾಂತ್ಯದ ಕನ್ನಡ
2.ಮೈಸೂರು ಪ್ರಾಂತ್ಯದ ಕನ್ನಡ
3.ಬಯಲುಸೀಮೆಕನ್ನಡ
4.ಮಧ್ಯ ಕರ್ನಾಟಕದ ಕನ್ನಡ
5.ಮಲೆನಾಡುಕನ್ನಡ
6.ಹವಿಗನ್ನಡ
7.ಕುಂದಗನ್ನಡ
8.ಉತ್ತರಕರ್ನಾಟಕಕನ್ನಡ
9.ಗುಲ್ಬರ್ಗಾ ಬೆಳಗಾವಿ ಕನ್ನಡ
10.ಮಂಗಳೂರು ಕನ್ನಡ
11.ಬೆಂಗಳೂರು ಕನ್ನಡ
12.ಧಾರವಾಡ, ಹಾವೇರಿ ಕನ್ನಡ

ಹೀಗೆ ಹಲವು ಕನ್ನಡದ ವೈವಿಧ್ಯತೆಯನ್ನು ವಿಂಗಡಿಸುತ್ತಾ ಹೋಗಬಹುದು. ಊರಿಗೆ ತಕ್ಕಂತೆ ಭಾಷೆಯೂ, ಬದಲಾಗುತ್ತಾ ಹೋಗುವುದನ್ನು ಗಮನಿಸುತ್ತೇವೆ.
ಪ್ರದೇಶಕ್ಕೆ ಅನುಗುಣವಾಗಿ ಆಹಾರ ಪದ್ಧತಿಯೂ ಬದಲಾದಂತೆ. ಭಾಷೆಯೂ ಸಹ ಸ್ವಾಭಾವಿಕವಾಗಿಯೇ ಬದಲಾಗುತ್ತಾ ಹೋಗುತ್ತದೆ. ಮುಂದುವರೆದು ಕನ್ನಡ ಭಾಷೆಯ ಅಗಾಧತೆ ಅರಿವಾಗಬೇಕಾದರೆ, ಕನ್ನಡ ನೆಲದಲ್ಲಿ ಜನ್ಮತಾಳಿದ ಅದರದೇ ಆದ, ಸಾಹಿತ್ಯ ವಲಯದ ವಿಸ್ತಾರಗಳ ಬಗ್ಗೆ ತಿಳಿದರೆ ಸಾಕು.
ನಮ್ಮ ಕನ್ನಡದ ಸಾಹಿತ್ಯ ಪ್ರಕಾರಗಳಾದ 'ಛಂದಸ್ಸು', 'ಕಂದಪದ್ಯಗಳು', 'ಚಂಪೂ ಕಾವ್ಯಗಳು', 'ವೃತ್ತಗಳು', 'ರಗಳೆಗಳು', 'ಮುಕ್ತಕಗಳು', 'ದ್ವಿಪದಿಗಳು', 'ತ್ರಿಪದಿಗಳು', 'ಷಟ್ಪದಿಗಳು', 'ದಾಸಸಾಹಿತ್ಯ', 'ಭಕ್ತಿ ಚಳುವಳಿ' ,' ಹರಿಕಥೆಗಳು', 'ಹರಿದಾಸ ಸಾಹಿತ್ಯ', 'ವಚನಗಳು' ಇನ್ನು ಅನೇಕ ಸಾಹಿತ್ಯ ಪ್ರಕಾರಗಳು ನಮ್ಮ ಕನ್ನಡನಾಡಿನಲ್ಲಿ ಜನಿಸಿ, ನಮ್ಮ ಮಾತೃ ಭಾಷೆ ಕನ್ನಡವನ್ನು ಸಮೃದ್ಧಗೊಳಿಸಿವೆ.

ತದನಂತರ ನಮ್ಮ ಕನ್ನಡದ ಪ್ರಾಚೀನತೆ ಹೇಳುವುದಾದರೆ, "ವಿಶ್ವ ಲಿಪಿಗಳ ರಾಣಿ" ಎಂದು, ವಿನೋಬಾಭಾವೆ ಅವರಿಂದ ಕರೆಯಲ್ಪಟ್ಟ ನಮ್ಮ ಕನ್ನಡ, ಲಭ್ಯವಾಗಿರುವ ದಾಖಲೆ ಪ್ರಕಾರ, ಅಧಿಕೃತವಾಗಿ 2500ಕ್ಕೂ ಹೆಚ್ಚಿನ ವರ್ಷಗಳ ಇತಿಹಾಸವಿದೆ. ಆದರೆ ಅದಕ್ಕೂ ಮೊದಲಿನ ದಾಖಲೆಗಳು ಲಭ್ಯವಿಲ್ಲ. ಅದಕ್ಕೂ ಮೊದಲಿನ ಸಂದರ್ಭದಲ್ಲಿ, ಪ್ರಾಕೃತದೊಂದಿಗೆ ಕನ್ನಡ ಬಳಸುತಿದ್ದರಂತೆ. ನಂತರದ ಆಳ್ವಿಕೆಗೆ ಬಂದ ರಾಜರೂ, ಪೂರ್ಣ ಕನ್ನಡವನ್ನು ಅಧಿಕೃತವಾಗಿ ರಾಜ್ಯಭಾಷೆಯಾಗಿಸಿದರು.

"ಕರ್ನಾಟ" ಪದವನ್ನು ಮಹಾಭಾರತದಲ್ಲೂ ಕಾಣುತ್ತೇವೆ. ಅಂದರೆ ತಿಳಿಯಬಹುದು ನಮ್ಮ ಭಾಷೆಯ ಪ್ರಾಚೀನತೆಯ ಬಗ್ಗೆ. ಭಾಷೆ ಇತ್ತು ಎಂದರೆ, 'ನಾಡಿನ ಅಸ್ತಿತ್ವ ಇದ್ದೇ ಇರುತ್ತಲ್ಲವೆ'!!

ಕನ್ನಡದ ಮೊದಲ ಶಬ್ದವೇ, ಅಶೋಕನ ಬ್ರಹ್ಮಗಿರಿ ಶಾಸನದ " ಇಸಿಲ" ಅಂದರೆ ಕೋಟೆಯೊಳಗಿನ ಊರು( ಈಗಿನ ಚಿತ್ರದುರ್ಗ ಎನ್ನಬಹುದು) ಆದರೆ ಇದೂ ಪ್ರಾಕೃತದೊಂದಿಗಿದ್ದು, ಕನ್ನಡದ ಮೊದಲ ಶಾಸನವಾಗಿ, ಕ್ರಿ.ಶ.450 ರ, ಕದಂಬರ ಹಲ್ಮಿಡಿ ಶಾಸನವಾಗಿದೆ. ಹೀಗೆ ತನ್ನದೇ ಆದ ಸ್ವಂತಿಕೆಯ ಸಾಹಿತ್ಯವಲಯ, ಭಾಷಾ ಪ್ರಾಚೀನತೆ,ಅಗಾಧತೆಯನ್ನು ಮಾನದಂಡವಾಗಿರಿಸಿದ, "ಶಾಸ್ತ್ರೀಯ ಭಾಷೆ"ಯ ಸ್ಥಾನಮಾನವು ನಮ್ಮ ಕನ್ನಡಕ್ಕೆ 2008ರಲ್ಲಿ ದೊರಕಿದೆ. ಅದು ಕನ್ನಡಿಗರಾದ ನಮಗೆಲ್ಲಾ ಹೆಮ್ಮೆ.

"ಕನ್ನಡದ ನೆಲದ ಪುಲ್ಲನೆಗೆ ಪಾವನ ತುಳಸಿ
ಕನ್ನಡದ ನೆಲದ ನೀರ್ವೊನಲೆನಗೆ ದೇವನದಿ"
ಎಂದು ನಮ್ಮ ಕನ್ನಡ ನೆಲದಲ್ಲಿ ಹುಟ್ಟುವ ಹುಲ್ಲು- ಗರಿಕೆಯನ್ನು ತುಳಸಿಗೂ, ನೀರನ್ನು ದೇವಗಂಗೆಗೂ ಹೋಲಿಕೆ ಕೊಟ್ಟ, "ಸಾಲಿ ರಾಮಚಂದ್ರರಾಯರ" ಮಾತೇ, ನಮ್ಮ ಕನ್ನಡದ ಬಗ್ಗೆ ನಮಗೆ ರೋಮಾಂಚನ ನೀಡುವುದು. ಕನ್ನಡಿಗರಿಗೆ ಸಾರ್ಥಕ ಎನಿಸುವುದು. "ಆರಂಕುಶ ವಿಟ್ಟೊಡಮ್, ನೆನೆಯುವುದೆನ್ನ ಮನಮ್ ಬನವಾಸಿ ದೇಶಮಂ "ಎನ್ನುವ ಆದಿಕವಿ ಪಂಪರ ಮಾತಿನಿಂದ ಪುಳಕಿತವಾಗುವುದಷ್ಟೇ ಅಲ್ಲ,

"ಎಲ್ಲಾದರು ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು" ಎನ್ನುವ ಕುವೆಂಪು ಅವರ ಆಶಯದಂತೆ, ಜಗತ್ತಿನೆಲ್ಲೆಡೆ ಇದ್ದರೂ ಸಹ, ನಾವು ನಾಡು-ನುಡಿ ಕನ್ನಡವನ್ನು ಮರೆತೂ ಕೂಡ ಮರೆಯಲಾರದೇ, ಮಾತನಾಡುವುದು ನಮ್ಮ ಕರ್ತವ್ಯ, ನಮ್ಮ ಹೊಣೆಯೂ ಆಗಿದೆ. "ನಿರಂತರ ಬಳಕೆಯಿಂದ ಮಾತ್ರ ಭಾಷಾ ಉಳಿವು ಸಾಧ್ಯ " ಎನ್ನುವಂತೆ, ಕೇವಲ ಬರಹಗಳಿಗೆ ಸೀಮಿತಗೊಳಿಸದೇ , ಹಾಡಿ-ಹೊಗಳುವುದಕ್ಕೆ ಸೀಮಿತಗೊಳಿಸದೇ, ದೈನಂದಿನ ಬದುಕಾಗಿ ಮಾಡನಾಡುವುದೇ ನಮ್ಮ ಭಾಷೆಗೆ ನಾವು ಕೊಡುವ ಗೌರವ.

– ಲೀಲಾವತಿ ವಿಜಯಕುಮಾರ.
ಹ.ಬೊ.ಹಳ್ಳಿ.

## ಕವಿ ಮನಸು

### ಭಾರವೆನಿಸದು ತಾಯಿಗೆ



ಉದರದೊಳಗಡೆ ಹೊತ್ತ ಗರ್ಭವು
ಭಾರವೆನಿಸದು ತಾಯಿಗೆ
ಹೆತ್ತು ಮಡಿಲಲಿ ಇರಿಸಿ ಬೆಳೆಸಲು
ಕಷ್ಟವೆನಿಸದು ಮಾತೆಗೆ

ಕಂದ ಬೆಳೆಯುತ ನಡೆಯ ತೊಡಗಲು
ಎತ್ತಲಾಗದು ಸುಲಭದಿ
ಮತ್ತೆ ಕರವನು ಹಿಡಿದು ನಡೆಯಲು
ಜತನ ಗೈವಳು ಮೌನದಿ

ಮಾವು ಹಲಸದು ಫಲವನೀಯಲು
ಮಾಡಿಕೊಂಡಿದೆ ಸಿದ್ಧತೆ
ಕಾಲ ಕಾಲಕೆ ಫಸಲನೀವುದು
ಸಸ್ಯಕಿರುವುದು ಬದ್ಧತೆ


ಹಲಸು ಮರವಿದು ಮಿಡಿಯ ಬಿಟ್ಟಿದೆ
ಮುಂದೆ ಬೆಳೆಯುವ ಹಂತದೆ
ಕೆಳಗೆ ನೀಡಿತೆ ಕೊಂಬೆಯಾಸರೆ
ಮರದ ಜಾಣ್ಮೆಯು ಇರುವುದೆ? ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಡಿ.೦೯ರಂದು ರಾಷ್ಟ್ರೀಯ ಲೋಕ ಅದಾಲತ್

**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಜಿಲ್ಲೆಯ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ರಾಜೀ ಮೂಲಕ ಬಗೆಹರಿಸಿಕೊಳ್ಳಬಹುದಾದ ಹಾಗೂ ವ್ಯಾಜ್ಯ ಪೂರ್ವ ದಾವಾ ಪ್ರಕರಣಗಳನ್ನು ರಾಜೀ ಸಂಧಾನ ಮೂಲಕ ಇತ್ಯರ್ಥಗೊಳಿಸಲು ಡಿ.09ರಂದು ಬೆಳಿಗ್ಗೆ 10ರಿಂದ ಹಳೆಯ ನ್ಯಾಯಾಲಯದ ಕಟ್ಟಡ ಹಾಗೂ ಹೊಸ ನ್ಯಾಯಾಲಯದ ಕಟ್ಟಡ ಹಾಗೂ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ರಾಷ್ಟ್ರೀಯ ಲೋಕ ಅದಾಲತ್ ನಡೆಯಲಿದೆ. ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗ ಪಡೆದುಕೊಳ್ಳಲು ಕೋರಿದೆ. ಹೆಚ್ಚಿನ ಮಾಹಿತಿಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಬಳ್ಳಾರಿ ಹಾಗೂ ಜಿಲ್ಲೆಯ ಎಲ್ಲಾ ತಾಲೂಕು ಕಾನೂನು ಸೇವಾ ಸಮಿತಿಯನ್ನು ಸಂಪರ್ಕಿಸಬಹುದು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎಸ್.ಎಚ್.ಪುಷ್ಪಾಂಜಲಿ ದೇವಿ ತಿಳಿಸಿದ್ದಾರೆ.

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 08-12-2023

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1591.86 ಅಡಿ |
| ಒಳ ಹರಿವು | 684 ಕ್ಯುಸೆಕ್ |
| ಹೊರ ಹರಿವು | 2498 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 12.655 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1628.71 ಅಡಿ |
| ಒಳ ಹರಿವು | 1621 ಕ್ಯುಸೆಕ್ |
| ಹೊರ ಹರಿವು | 6002 ಕ್ಯುಸೆಕ್ |
| ಸಾಮರ್ಥ್ಯ | 89.298 ಟಿಎಂಸಿ |

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಮತದಾರರ ನೊಂದಣಿ ಅಭಿಯಾನಕ್ಕೆ ಚಾಲನೆ

## ಉಪತಹಶೀಲ್ದಾರ ರೇಖಾ ದೀಕ್ಷಿತ್ ಹೇಳಿಕೆ | ಮತದಾನದಿಂದ ದೇಶ ಕಟ್ಟುವಲ್ಲಿ ಪ್ರಮುಖ ಪಾತ್ರವಾಗಿರುತ್ತದೆ





**ಹಂಪಿ ಟೈಮ್ಸ್ ಕೊಪ್ಪಳ**
ಮತದಾನ ಎಂಬುದು ಪವಿತ್ರಕಾರ್ಯವಾಗಿದ್ದು, ದೇಶ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆದ್ದರಿಂದ 18 ವರ್ಷ ಪೂರ್ಣಗೊಂಡ ಎಲ್ಲ ಯುವಕ, ಯುವತಿಯರು ಮತದಾರರ ನೋಂದಣಿ ಮಾಡಿಸಬೇಕು ಎಂದು ಕೊಪ್ಪಳ ಉಪತಹಶೀಲ್ದಾರ ರೇಖಾ ದೀಕ್ಷಿತ್ ಹೇಳಿದರು. ಶುಕ್ರವಾರದಂದು ನಗರದ ಗವಿಸಿದ್ದೇಶ್ವರ ಪದವಿ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಯುವ ಮತದಾರರ ನೋಂದಣಿ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಬಹಳಷ್ಟು ಯುವಕರು ಮತದಾನದ ಮಹತ್ವದ ಬಗ್ಗೆ ತಿಳಿದಿಲ್ಲ. ಇದರಿಂದನಿರಾಸಕ್ತಿಹೊಂದಿಜವಾಬ್ದಾರಿಯಿಂದ ವಂಚಿತರಾಗುತ್ತಿದ್ದಾರೆ. ಮತದಾನ ಎನ್ನುವುದು ಪವಿತ್ರವಾದ ಕಾರ್ಯವಾಗಿದ್ದು, ದೇಶ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆದ್ದರಿಂದ 18 ವರ್ಷ ತುಂಬಿದ ಎಲ್ಲಾ ಯುವಕ ಮತ್ತು ಯುವತಿಯರು ಅಗತ್ಯವಾದ ವರ್ಗಾವಣೆ ಪ್ರಮಾಣಪತ್ರದ ಪ್ರತಿ, ಆಧಾರ ಕಾರ್ಡ ಪ್ರತಿ, 02 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಹಾಗೂ ಪಾಲಕರ ಮತದಾನ ಗುರುತಿನ ಚೀಟಿಯ ಪ್ರತಿಯೊಂದಿಗೆ ನಿಮ್ಮ ಹತ್ತಿರದ ಮತಗಟ್ಟೆ ಅಧಿಕಾರಿಗೆ ಸಂಪರ್ಕಿಸಿ ನೋಂದಣಿ ಮಾಡಿಕೊಳ್ಳಬೇಕೆಂದು ಯುವ ಮತದಾರರಿಗೆ ಕರೆ ನೀಡಿದರು. ನಿಮ್ಮ ಮನೆಯಲ್ಲಿ ಹಾಗೂ ಅಕ್ಕಪಕ್ಕದ ಮನೆಯಲ್ಲಿ 18 ವರ್ಷ ತುಂಬಿದವರು ಹೊಸದಾಗಿ ಮತದಾರರ ಪಟ್ಟಿಯಲ್ಲಿ ನೋಂದಣಿ ಮಾಡಿಕೊಳ್ಳಲು ಮಾಹಿತಿ ನೀಡುವಂತೆ ತಿಳಿಸಿದರು.
ಅಕ್ಷರ ದಾಸೋಹ ಕಾರ್ಯಕ್ರಮದ ಸಹಾಯಕ ನಿರ್ದೇಶಕ ಹನಮಂತಪ್ಪ ಮಾತನಾಡಿ, ಪ್ರತಿಯೊಬ್ಬ ಯುವ ಮತದಾರ ಯಾವುದೇ ಕಾರಣಕ್ಕೂ ನಿರ್ಲಕ್ಷ್ಯವಹಿಸಬಾರದು. ಮತದಾನ ಎನ್ನುವುದು ಪವಿತ್ರ ಕಾರ್ಯ. ಚುನಾವಣಾ ಆಯೋಗದಿಂದ ಮತದಾನ ಗುರುತಿನ ಚೀಟಿ ವಿತರಣೆಯಾಗುತ್ತದೆ. ಪ್ರತಿ ಚುನಾವಣೆಯಲ್ಲಿ ಮತದಾನ ಮಾಡುವುದು ಎಲ್ಲರ ಕರ್ತವ್ಯ ಹಾಗೂ ಹಕ್ಕಾಗಿದೆ. ಒಮ್ಮೆ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾದಲ್ಲಿ ಎಲ್ಲಾ ಚುನಾವಣೆಗಳಲ್ಲಿ ಮತದಾನ ಹಕ್ಕು ಚಲಾಯಿಸಬಹುದಾಗಿದೆ. 18 ವರ್ಷ ತುಂಬಿದ ಯುವ ಮತದಾರರು ಹೊಸದಾಗಿ ನೋಂದಣಿಗಾಗಿ ಅಗತ್ಯ ದಾಖಲೆಗಳೊಂದಿಗೆ ನಮೂನೆ-6ರಲ್ಲಿ ಅರ್ಜಿ ಸಲ್ಲಿಸಬೇಕು ಎಂದು ತಿಳಿಸಿದರು.
ಕಾರ್ಯಕ್ರಮದಲ್ಲಿ ತಾಲೂಕ ಯೋಜನಾಧಿಕಾರಿ ರಾಜೇಸಾಬ ನದಾಫ್, ಪದವಿ ಕಾಲೇಜಿನ ಉಪಪ್ರಾಂಶುಪಾಲ ಡಾ॥ ಕರಿಬಸವೇಶ್ವರ ಬಿ, ಉಪನ್ಯಾಸಕರುಗಳಾದ ಶರಣಪ್ಪ ಜಾಲಿಹಾಳ, ಪ್ರವೀಣ ಹಾದಿಮನಿ, ಡಾ॥ ಚನ್ನಬಸವ, ಡಾ॥ ಶಶಿಕಾಂತ, ಮಂಜುನಾಥ ಗಾಳಿ, ತಾಲೂಕ ಸ್ವೀಪ್ ತಂಡದ ಸದಸ್ಯರಾದ ದೇವರಾಜ ಪತ್ತಾರ, ಬಸವರಾಜ ಬಳಿಗಾರ, ಕಾಲೇಜಿನ ವಿದ್ಯಾರ್ಥಿಗಳು ಹಾಜರಿದ್ದರು.

# ಬಾಲಕಿಯ ಮೇಲೆ ಅತ್ಯಾಚಾರ ಅಪರಾಧಿಗೆ 20 ವರ್ಷ ಜೈಲು ಶಿಕ್ಷೆ

**ಹಂಪಿ ಟೈಮ್ಸ್ ಕೊಪ್ಪಳ**
ಅಪ್ರಾಪ್ತ ಬಾಲಕಿಯನ್ನು ಅಪಹರಿಸಿ ಅತ್ಯಾಚಾರ ಎಸಗಿದ ಸಂಗಾಪುರದ ಪ್ರವೀಣಕುಮಾರ ಭೋವಿ ಎಂಬ ವ್ಯಕ್ತಿಯ ಮೇಲಿನ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೆ ೀವಾರಿ ನ್ಯಾಯಾಲಯ (ಪೋಕ್ಸೋ) ನ್ಯಾಯಾಧೀಶರಾದ ಕುಮಾರ ಡಿ.ಕೆ ಅವರು ಆರೋಪಿಗೆ 20 ವರ್ಷಗಳ ಜೈಲು ಶಿಕ್ಷೆ ಹಾಗೂ ರೂ.25,000 ಗಳ ದಂಡವನ್ನು ವಿಧಿಸಿ ತೀರ್ಪು ಪ್ರಕಟಿಸಿದ್ದಾರೆ.
ಆರೋಪಿಯು ಅಪ್ರಾಪ್ತ ಬಾಲಕಿಯನ್ನು ಪ್ರೀತಿಸಿ ಮದುವೆಯಾಗುವುದಾಗಿ ನಂಬಿಸಿ ದಿ:23-07-2020 ರಂದು ಕೃಷ್ಣಾಪುರದ ಡಗ್ಗಿ ಗ್ರಾಮದ ಬಾಲಕಿಯ ಮನೆಯ ಹತ್ತಿರ ಹೋಗಿ, ಬಾಧಿತಳನ್ನು ಅಪಹರಿಸಿ ಗಂಗಾವತಿಯಿಂದ ವಿಜಯಪುರದ ಬಸವನಗರ ಆಶ್ರಯ ಕಾಲೋನಿಯ ಆಶ್ರಯ ಮನೆಗೆ ಕರೆದುಕೊಂಡು ಹೋಗಿ, ಬಾಲಕಿಯ ಮೇಲೆ ಅತ್ಯಾಚಾರ ಎಸಗಿರುವ ಆರೋಪದ ಮೇಲೆ ಗಂಗಾವತಿ ಗ್ರಾಮೀಣ ಪೊಲೀಸರು ದೂರು ದಾಖಲಿಸಿಕೊಂಡಿದ್ದರು. ಪ್ರಕರಣದ ತನಿಖೆಯನ್ನು ಸುರೇಶ ತಳವಾರ ಹಾಗೂ ಗಂಗಾವತಿ ಗ್ರಾಮೀಣ ವೃತ್ತದ ಸಿಪಿಐ ಉದಯರವಿ ಅವರು ನಿರ್ವಹಿಸಿದ್ದು, ಆರೋಪಿತನ ಮೇಲಿನ ಆರೋಪಣೆಗಳು ಮೇಲ್ನೋಟಕ್ಕೆ ಸಾಬೀತಾಗಿದ್ದರಿಂದ ಆರೋಪಿತನ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.
ಪ್ರಕರಣದ ವಿಚಾರಣೆಯನ್ನು ನಡೆಸಿದ ನ್ಯಾಯಾಲಯವು ಆರೋಪಿ ಮೇಲಿನ ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ ಅಪರಾಧಿಗೆ 20 ವರ್ಷಗಳ ಜೈಲು ಶಿಕ್ಷೆ ಹಾಗೂ ರೂ.25000 ಗಳ ದಂಡವನ್ನು ವಿಧಿಸಿ ತೀರ್ಪು ನೀಡಿದ್ದು, ದಂಡದ ಮೊತ್ತದಲ್ಲಿ ರೂ.10000 ಗಳನ್ನು ಬಾಧಿತಳಿಗೆ ಪರಿಹಾರವಾಗಿ ನೀಡುವಂತೆ ಆದೇಶಿಸಿದೆ. ಪ್ರಕರಣದಲ್ಲಿ ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕರಾದ(ಪೋಕ್ಸೋ) ಗೌರಮ್ಮ ದೇಸಾಯಿ ಅವರು ವಾದ ಮಂಡಿಸಿದ್ದರು ಎಂದು ನ್ಯಾಯಾಲಯದ ತಿಳಿಸಿದೆ.




# ಚಳಿಗಾಲ ಅಧಿವೇಶನದೊಳಗೊಂದು ಸುತ್ತು



## ರಾಜ್ಯ ಎಸ್.ಸಿ.ಎಸ್.ಪಿ, ಟಿ.ಎಸ್.ಪಿ ಅನುದಾನ ದುರ್ಬಳಕೆಗಿಲ್ಲ ಅವಕಾಶ

■ **ಹಂಪಿ ಟೈಮ್ಸ್ ಬೆಳಗಾವಿ:** ರಾಜ್ಯ ಸರ್ಕಾರವು ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಯೋಜನೆಗೆ ಮೀಸಲಿಟ್ಟಿರುವ ಅನುದಾನವನ್ನು ಯಾವುದೇ ಕಾರಣಕ್ಕೂ ದುರ್ಬಳಕೆ ಆಗಲು ಅವಕಾಶ ನೀಡುವುದಿಲ್ಲ ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸ್ಪಷ್ಟಪಡಿಸಿದರು.

ಅವರು ಶುಕ್ರವಾರ ವಿಧಾನಪರಿಷತ್‌ನಲ್ಲಿ ಸದಸ್ಯ ಛಲವಾದಿ ಟಿ ನಾರಾಯಣ ಸ್ವಾಮಿ ಕೇಳಿದ ಚುಕ್ಕೆ ಗುರುತಿನ ಪ್ರಶ್ನೆ 62 (562)ಕ್ಕೆ ಉತ್ತರಿಸಿದರು. ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಧಿನಿಯಮ 2013 ಮತ್ತು ನಿಯಮಗಳು 2017 ರಲ್ಲಿ ಪ.ಜಾತಿ ಮತ್ತು ಪಂಗಡದ ಜನರಿಗೆ ನೇರವಾಗಿ ಪ್ರಯೋಜನವಾಗುವ ಕಾರ್ಯಕ್ರಮಗಳಿಗೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನವನ್ನು ಹಂಚಿಕೆ ಮಾಡಿ ಅನುಷ್ಠಾನಗೊಳಿಸಲು ಅವಕಾಶವಿದ್ದು ಈ ಅನುದಾನವನ್ನು ಯಾವುದೇ ಸಂದರ್ಭದಲ್ಲೂ ಅನ್ಯ ಉದ್ದೇಶಕ್ಕಾಗಿ ಬಳಸುವುದಿಲ್ಲ ಹಾಗೂ ಕಾಯ್ದೆಯ ಉಲ್ಲಂಘನೆಯ ಅವಕಾಶ ನೀಡುವುದಿಲ್ಲ ಎಂದು ತಿಳಿಸಿದರು.

ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಡಿ ಗ್ಯಾರಂಟಿ ಯೋಜನೆಗಳಿಗಾಗಿ, ಗೃಹಲಕ್ಷ್ಮೀ ಯೋಜನೆಗೆ 5075 ಕೋಟಿ ರೂ, ಅನ್ನಭಾಗ್ಯ ಯೋಜನೆಗೆ 2779.50 ಕೋಟಿ ರೂ, ಗೃಹಜ್ಯೋತಿ ಯೋಜನೆಯಡಿ 2410 ಕೋಟಿ ರೂ, ಶಕ್ತಿ ಯೋಜನೆಗೆ 812 ಕೋಟಿ ರೂ, ಯುವನಿಧಿ ಯೋಜನಗೆಗೆ 67.50 ಕೋಟಿ ರೂ ಒದಗಿಸಲಾಗಿದ್ದು, ಈ ಮೊತ್ತವನ್ನು ಪ'.ಜಾ ತಿ/ಪ'ಂಗ'ಡ'ದ'ವ'ರಿಗ' ಉಪಯೋಗಿಸುತ್ತಿರುವುದರಿಂದ ಸದರಿ ಅನುದಾನದ ದುರ್ಬಳಕೆ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ತಿಳಿಸಿದರು. ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನದಲ್ಲಿ ದುರ್ಬಳಕೆ ತಡೆಯುವ ಉದ್ದೇಶದಿಂದಲೇ ಕಾಯ್ದೆಯ ಸೆಕ್ಷನ್ 7 (ಡಿ) ಯನ್ನು ಕೈಬಿಡಲು ನಿನ್ನೆ ನಡೆದ ಕ್ಯಾಬಿನೆಟ್ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಪ.ಜಾತಿ ಮತ್ತು ಪ.ವರ್ಗಗಳ ಕಲ್ಯಾಣಕ್ಕಾಗಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಲ್ಲಿ ಮೀಸಲಿಟ್ಟ ಅನುದಾನದಲ್ಲಿ 2023–24 ನೇ ಸಾಲಿನಲ್ಲಿ 11 ಸಾವಿರಕ್ಕೂ ಅಧಿಕ ಮೊತ್ತವನ್ನು ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ವರ್ಗಾಯಿಸಿದೆ ಎಂಬ ವಿಧಾನಪರಿಷತ್ ಸದಸ್ಯ ಛಲವಾದಿ ಟಿ ನಾರಾಯಣ ಸ್ವಾಮಿ ಅವರ ಪ್ರಶ್ನೆಗೆ ಪೂರಕವಾಗಿ ಸದಸ್ಯರಾದ ತೇಜಸ್ವಿನಿಗೌಡ, ಭೋಜೇಗೌಡ, ಕೋಟ ಶ್ರೀನಿವಾಸ ಪೂಜಾರಿ, ತಿಪ್ಪೇಸ್ವಾಮಿ, ಶಾಂತಾರಾಮ್, ರವಿಕುಮಾರ್ ದನಿಗೂಡಿಸಿದರು.

ಸರ್ಕಾರದ ಉತ್ತರದ ಕುರಿತು ಆಕ್ಷೇಪ ವ್ಯಕ್ತಪಡಿಸಿದ ವಿರೋಧ ಪಕ್ಷಗಳ ಸದಸ್ಯರು ಸದನದ ಬಾವಿಗಳಿದು ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು. ಇದರಿಂದಾಗಿ ಸದನವನ್ನು 2 ಬಾರಿ 10 ನಿಮಿಷಗಳ ಕಾಲ ಮುಂದೂಡಲಾಯಿತು. ಅಂತಿಮವಾಗಿ ಈ ಕುರಿತು ಸೋಮವಾರ ಅರ್ಧ ಗಂಟೆಯ ಚರ್ಚೆಗೆ ಅವಕಾಶ ನೀಡುವುದಾಗಿ ಸಭಾಪತಿಗಳು ಅನುಮತಿ ನೀಡುವ ಮೂಲಕ ವಿರೋಧಪಕ್ಷಗಳ ಪ್ರತಿಭಟನೆಯನ್ನು ತಣ್ಣಗಾಗಿಸಿದರು. ಸರ್ಕಾರದ ಪರವಾಗಿ ಸಚಿವ ಪ್ರಿಯಾಂಕ ಖರ್ಗೆ, ಕೆ.ಎಚ್. ಮುನಿಯಪ್ಪ ಮಾತನಾಡಿದರು.

## ಪ್ಯಾರೀಸ್ ಒಲಂಪಿಕ್ಸ್‌ಗೆ ರಾಜ್ಯದ 75 ಕ್ರೀಡಾಪಟುಗಳ ಆಯ್ಕೆ

### ಕ್ರಿಡಾ ಸಚಿವ ಬಿ.ನಾಗೇಂದ್ರ ಹೇಳಿಕೆ | ತಲಾ ರೂ 10 ಲಕ್ಷ ವಾರ್ಷಿಕ ಗರಿಷ್ಠ ಪ್ರೋತ್ಸಾಹ ಧನ

■ **ಹಂಪಿ ಟೈಮ್ಸ್ ಬೆಳಗಾವಿ**

ಮುಂದಿನ ವರ್ಷ ಪ್ಯಾರೀಸ್ ನಲ್ಲಿ ನಡೆಯುವ ಒಲಂಪಿಕ್ಸ್ ನಲ್ಲಿ ಪದಕ ವಿಜೇತ ಸಾಮರ್ಥ್ಯವುಳ್ಳ ಪ್ಯಾರಾ ಕ್ರೀಡಾಪಟುಗಳ ನ್ನೊಳಗೊಂಡಂತೆ 75 ಕ್ರೀಡಾಪಟುಗಳನ್ನು ರಾಜ್ಯದಲ್ಲಿ ಅಮೃತ ಕ್ರೀಡಾ ದತ್ತು ಯೋಜನೆಯಡಿ ಆಯ್ಕೆ ಮಾಡಲಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಬಿ.ನಾಗೇಂದ್ರ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಸದಸ್ಯ ಎಸ್. ರುದ್ರೇಗೌಡ ಅವರ ಚುಕ್ಕೆ ಗುರುತಿನ ಪ್ರಶ್ನೆ 566 (562)ಕ್ಕೆ ಉತ್ತರಿಸಿದರು. ಪ್ಯಾರೀಸ್‌ನಲ್ಲಿ ನಡೆಯುವ ಒಲಂಪಿಕ್ಸ್ ನಲ್ಲಿ ಭಾಗವಹಿಸಲು ಸಹಾಯವಾಗುವಂತೆ ರಾಜ್ಯದ ಕ್ರೀಡಾಪಟುಗಳಿಗೆ 2021–22 ನೇ ಸಾಲಿನಿಂದ ಅಮೃತ ಕ್ರೀಡಾ ದತ್ತು ಯೋಜನೆಯನ್ನುಅನುಷ್ಠಾನಗೊಳಿಸಲಾಗಿದೆ.

ಒಲಂಪಿಕ್ಸ್ ಸೇರಿದಂತೆ ಅಂತಾರಾಷ್ಟ್ರಿಯ ಮಟ್ಟದಲ್ಲಿ ಸಾಧನೆ ಮಾಡುವ ಸಾಮರ್ಥ್ಯ ಹೊಂದಿರುವ ಪ್ರತಿಭಾವಂತ ಕ್ರೀಡಾಪಟುಗಳನ್ನು ಗುರುತಿಸಿ, ಪೋಷಿಸಿ, ಸಾಧನೆಗೆ ಅಗತ್ಯವಾದ ಬೆಂಬಲ ವ್ಯವಸ್ಥೆ ನೀಡುವುದು ಈ ಯೋಜನೆಯ ಗುರಿಯಾಗಿದೆ. ಈ ಯೋಜನೆಯ ಫಲಾನುಭವಿಗಳಿಗೆ ತರಬೇತಿಗಾಗಿ, ಕ್ರೀಡಾ ವಿಜ್ಞಾನದ ಬೆಂಬಲ, ಪೌಷ್ಟಿಕ ಆಹಾರಕ್ಕಾಗಿ, ತರಬೇತಿಗೆ ಅಗತ್ಯವಿರುವ ಕ್ರೀಡಾ ಕಿಟ್ ಖರೀದಿಸಲು, ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಲು, ದೈನಂದಿನ ಅಗತ್ಯಗಾಗಿ ಮತ್ತು ಇತರೆ ವೆಚ್ಚಗಳಿಗಾಗಿ ತಲಾ ರೂ 10 ಲಕ್ಷ ವಾರ್ಷಿಕ ಗರಿಷ್ಠ ಪ್ರೋತ್ಸಾಹ ಧನ ನೀಡಲಾಗುತ್ತಿದೆ ಎಂದು ತಿಳಿಸಿದರು.

## ಜಲ ಜೀವನ್ ಮಿಷನ್: 46.98 ಲಕ್ಷ ಮನೆಗಳಿಗೆ ನಳ ಸಂಪರ್ಕ

### ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆ

■ **ಹಂಪಿ ಟೈಮ್ಸ್ ಬೆಳಗಾವಿ:**

ರಾಜ್ಯದಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಈವರೆಗೆ 46.98 ಲಕ್ಷ ಮನೆಗಳಿಗೆ ಕಾರ್ಯತ್ಮಕ ನಳ ಸಂಪರ್ಕ ಕಲ್ಪಿಸಲಾಗಿದೆ. 71.50 ಲಕ್ಷ ಗ್ರಾಮೀಣ ಮನೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ನೀಡಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಶುಕ್ರವಾರ ಬೆಳಗಾವಿ ಅಧಿವೇಶನದಲ್ಲಿ ವಿಧಾನಪರಿಷತ್‌ನ ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಕೇಶವ ಪ್ರಸಾದ್ ಎಸ್ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದರು. ರಾಜ್ಯದಲ್ಲಿ ಒಟ್ಟು 101.17 ಲಕ್ಷ ಗ್ರಾಮೀಣ ಮನೆಗಳಿವೆ. ಜಲ ಜೀವನ್ ಮಿಷನ್ ಯೋಜನೆಯಡಿ ಈವರೆಗೆ 71.50 ಲಕ್ಷ ಗ್ರಾಮೀಣ ಮನೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಲಾಗಿದೆ. ಈ ಯೋಜನೆಗೆ ಈವರೆಗೆ ಕೇಂದ್ರ ಸರ್ಕಾರ ರೂ.6918.31 ಕೋಟಿ ಹಾಗೂ ರಾಜ್ಯ ಸರ್ಕಾರ ರೂ.9226.09 ಕೋಟಿ ಅನುದಾನ ಬಿಡುಗಡೆ ಮಾಡಿದೆ ಎಂದು ತಿಳಿಸಿದರು. ಜಲ ಜೀವನ್ ಮಿಷನ್ ಕಾರ್ಯಕ್ರಮದಡಿಯಲ್ಲಿ ಸುಸ್ಥಿರ ಜಲಮೂಲವನ್ನು ಆಧರಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಸದರಿ ಯೋಜನೆಯ ಕಳಪೆ ಕಾಮಗಾರಿಗಳ ದೂರುಗಳನ್ನು ಪರಿಗಣಿಸಿ, ಈ ಕಾಮಗಾರಿಗಳನ್ನು 3ನೇ ವ್ಯಕ್ತಿ ತಪಾಸಣಾ ಸಂಸ್ಥೆಯಿಂದ ಪರಿಶೀಲಿಸಲು ತೀರ್ಮಾನಿಸಲಾಗಿದೆ. ಅದರಂತೆ ಮೆ॥ ಬ್ಯೂರೋ ವೆರಿಟಿಸ್ (ಇಂ) ಪ್ರೈ.ಲಿ. ಸಂಸ್ಥೆಯಿಂದ 3 ನೇ ವ್ಯಕ್ತಿ ತಪಾಸಣೆಯನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರವು ಜಲ ಜೀವನ್ ಮಿಷನ್ ಯೋಜನೆಗಾಗಿ ಬಿಡುಗಡೆ ಮಾಡಿರುವ ಅನುದಾನದ ಪೈಕಿ ಅಕ್ಟೋಬರ್–23 ರ ಅಂತ್ಯಕ್ಕೆ ರೂ.764.69 ಕೋಟಿಗಳ ಅನುದಾನ ಬಾಕಿ ಇರುತ್ತದೆ. ಸದರಿ ಅನುದಾನವನ್ನು ವಿಭಾಗಗಳ ಕೋರಿಕೆಯಂತೆ ಬಿಡುಗಡೆ ಮಾಡಿ ವೆಚ್ಚ ಭರಿಸಲು ಕ್ರಮವಹಿಸಲಾಗಿದೆ. ಯೋಜನೆಯನ್ನು ಪೂರ್ಣಗೊಳಿಸಲು ಕಾಲ ಕಾಲಕ್ಕೆ ಪ್ರಗತಿ ಪರಿಶೀಲನಾ ಸಭೆಗಳನ್ನು ಆಯೋಜಿಸಿ ಕಾಮಗಾರಿಗಳ ಪ್ರಗತಿಯ ಹಂತವನ್ನು ಮೇಲ್ವಿಚಾರಣೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

## ಬಾಲಾಪರಾಧ: 5 ವರ್ಷಗಳಲ್ಲಿ 381 ಪ್ರಕರಣ ದಾಖಲು

### ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಮಾಹಿತಿ | ಜಾಗೃತಿಗೆ ಕ್ರಿಯಾಯೋಜನೆ

■ **ಹಂಪಿ ಟೈಮ್ಸ್ ಬೆಳಗಾವಿ**

ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ಬಾಲಾಪರಾಧ ಕಾಯ್ದೆ ಅಡಿಯಲ್ಲಿ ಗೃಹ ಇಲಾಖೆಯಲ್ಲಿ 381 ಪ್ರಕರಣಗಳು ದಾಖಲಾಗಿವೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ತಿಳಿಸಿದರು.

ಶುಕ್ರವಾರ ಬೆಳಗಾವಿ ಅಧಿವೇಶನದಲ್ಲಿ ವಿಧಾನಪರಿಷತ್‌ನ ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಗೋವಿಂದ ರಾಜು ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದರು.

ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಬಾಲ ನ್ಯಾಯ ( ಮಕ್ಕಳ ಪಾಲನೆ ಮತ್ತು ರಕ್ಷಣೆ)ಕಾಯ್ದೆ 2015, ಮಾದರಿ ನಿಯಮಗಳು 2016 ರಡಿ ರಾಜ್ಯಾದ್ಯಂತ ರಚಿಸಲಾಗಿರುವ 33 ಬಾಲ ನ್ಯಾಯ ಮಂಡಳಿಗಳಲ್ಲಿ ಕಳೆದ 5 ವರ್ಷಗಳಲ್ಲಿ 9430 ಪ್ರಕರಣಗಳು ದಾಖಲಾಗಿವೆ. ರಾಜ್ಯದಲ್ಲಿ 18 ವರ್ಷದೊಳಗಿನ ಯುವಕ ಯುವತಿಯರು ಮಾದಕ ವಸ್ತು ವ್ಯಸನಿಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದಕ್ಕಾಗಿ ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ಮೂಲಕ ಜಿಲ್ಲೆ, ತಾಲೂಕು ಹಾಗೂ ಪಂಚಾಯತ್ ವ್ಯಾಪ್ತಿಯಲ್ಲಿ ಪಾಲನೆ ಮತ್ತು ರಕ್ಷಣೆಗೆ ಅಗತ್ಯವಿರುವ ಮಕ್ಕಳಿಗೆ ಸರ್ಕಾರದಿಂದ ಜಾರಿಯಲ್ಲಿರುವ ಯೋಜನೆ/ಕಾರ್ಯಕ್ರಮಗಳು ಮತ್ತು ಮಕ್ಕಳ ರಕ್ಷಣೆಗಾಗಿ ಇರುವ ಕಾಯದೆ ಕಾನೂನುಗಳ ಬಗ್ಗೆ ಅರಿವು ಮೂಡಿಸುವುದರೊಂದಿಗೆ ಶಾಲಾ ಕಾಲೇಜು ಮಕ್ಕಳಿಗೆ ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಕೇಂದ್ರ ಸರ್ಕಾರದ ಅನುದಾನದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಒಟ್ಟು 32 ಮಾದಕ ವಸ್ತು ವ್ಯಸನಿಗಳ ಸಮಗ್ರ ಪುನರ್ವಸತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಸದರಿ ಕೇಂದ್ರಗಳಲ್ಲಿ ಇಂತಹ ಯುವಕ ಯುವತಿಯರಿಗೆ ಸೂಕ್ತ ಸಮಾಲೋಚನೆ ಮತ್ತು ಔಷದೋಪಚಾರ ನೀಡುವ ಮೂಲಕ ದುಷ್ಚಟಗಳಿಂದ ಹೊರಬರಲು ಪ್ರೇರೇಪಿಸಲಾಗುತ್ತಿದೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ನಶಾ ಮುಕ್ತ ಭಾರತ ಅಭಿಯಾನ ಯೋಜನೆಯಡಿ ಮೊದಲ ಹಂತದಲ್ಲಿ 6 ಜಿಲ್ಲೆಗಳನ್ನು ಮತ್ತು 2 ನೇ ಹಂತದಲ್ಲಿ 21 ಜಿಲ್ಲೆಗಳನ್ನು 2023–24 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಕೇಂದ್ರ ಸರ್ಕರವು ಗುರುತಿಸಿದೆ. ಸದರಿ ಯೋಜನೆಯಡಿ ಶಾಲಾ ಕಾಲೇಜುಗಳಲ್ಲಿ ಸಮುದಯದಲ್ಲಿ ಮಾದಕ ವಸ್ತು ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಕೇಂದ್ರ ಸರ್ಕಾರದ ನ್ಯಾಷನಲ್ ಆಕ್ಷನ್ ಪ್ಲಾನ್ ಫಾರ್ ಡ್ರಗ್ ಡಿಮಾಂಡ್ ರಿಡಕ್ಷನ್ ಯೋಜನೆಯಡಿ ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಜಾಗೃತಿಗಾಗಿ ಕ್ರಿಯಾ ಯೋಜನೆಯನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು, ಕೇಂದ್ರ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ ಎಂದು ತಿಳಿಸಿದರು.

## ರಾಷ್ಟ್ರ, ಅಂತರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಿ

**ಮೊದಲ ಪುಟದಿಂದ**

ಅವರು ಇಲ್ಲಿನ ವಿಜ್ಞಾನ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ ರಾಜ್ಯ ಮಟ್ಟದ ಬಾಲ್ ಬ್ಯಾಡ್‌ಮಿಂಟನ್ ಪಂದ್ಯಾವಳಿಗಳ ಉದ್ಘಾಟನೆ ನೆರವೇರಿಸಿ ಮಾತನಾಡಿದರು. ಒಬ್ಬ ವ್ಯಕ್ತಿಯ ಜೀವನದಲ್ಲಿ ಸರ್ವತೋಮುಖ ಸಾಧನೆ ಮಾಡಲು ಕೇವಲ ಶಿಕ್ಷಣದಲ್ಲಿ ಮಾತ್ರ ಸಾಧನೆ ಮಾಡಿದರೆ ಸಾಲದು ಕ್ರೀಡೆಗಳು ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿಯೂ ಸಹ ಸಕ್ರಿಯವಾಗಿ ಭಾಗವಹಿಸುವುದರಿಂದ ವ್ಯಕ್ತಿತ್ವ ವಿಕಸನವಾಗುತ್ತದೆ ಎಂದು ತಿಳಿಸಿದರು.

ಪ್ರಸ್ತಾವಿಕವಾಗಿ ಮಾತನಾಡಿದ ಚಿತ್ತವಾಡಿಗಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಹಾಗೂ ವಿಜಯನಗರ ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯ ನಾಗರಾಜ್ ಹವಲ್ದಾರ್ ಮಾತನಾಡಿ, ಪದವಿ ಪೂರ್ವ ಕಾಲೇಜುಗಳ ವಿವಿಧ ಕ್ರೀಡಾಕೂಟಗಳನ್ನು ವಿವಿಧ ಜಿಲ್ಲೆಗಳಿಗೆ ಹಂಚಿಕೆ ಮಾಡುತ್ತಾರೆ. ಅದರಂತೆ ನೂತನ ವಿಜಯನಗರ ಜಿಲ್ಲೆಗೆ ರಾಜ್ಯಮಟ್ಟದ ಬಾಲ್ ಬ್ಯಾಡ್‌ಮಿಂಟನ್ ಪಂದ್ಯಾವಳಿಗಳನ್ನು ನಡೆಸಲು ಅವಕಾಶ ನೀಡಲಾಗಿದೆ. ಹೊಸ ಜಿಲ್ಲೆ ಹಾಗೂ ಹೊಸ ಅನುಭವವಾದರೂ ಸಹ ವಿಜ್ಞಾನ ಕಾಲೇಜಿನ ಪ್ರಾಚಾರ್ಯ ವಿದ್ಯಾಧರ ಹಾಗೂ ಅವರ ತಂಡ ಈ ಪಂದ್ಯಾವಳಿಗಳ ಆತಿಥ್ಯದ ಹೊಣೆಯನ್ನು ಹೊತ್ತಿರುವುದು ನಮ್ಮ ಇಲಾಖೆಗೆ ಹೆಮ್ಮೆ ತಂದಿದೆ ಎಂದು ಶ್ಲಾಘಿಸಿದರು.



ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಹಿರಿಯ ಪ್ರಾಚಾರ್ಯ ಗಿರೀಶ್.ಎಂ.ಟಿ. ಇವರು ಮಾತನಾಡಿ ವಿದ್ಯಾರ್ಥಿಗಳೆಲ್ಲಾ ಕ್ರೀಡಾ ಮನೋಭಾವದಿಂದ ಆಟವಾಡಬೇಕು. ಸೋಲು ಗೆಲುವು ಮುಖ್ಯವಲ್ಲ, ಬದಲಾಗಿ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದು ಮುಖ್ಯ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಜ್ಞಾನ್ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ವಿಧ್ಯಾಧರ. ಜಿ ಮಾತನಾಡಿ, ರಾಜ್ಯಮಟ್ಟದ ಸ್ಪರ್ಧೆಗಳನ್ನು ನಡೆಸಲು ನಮ್ಮ ಕಾಲೇಜಿಗೆ ಅವಕಾಶ ಕೊಟ್ಟಿದ್ದಕ್ಕೆ ಇಲಾಖೆಗೆ ಧನ್ಯವಾದಗಳನ್ನು ಸಲ್ಲಿಸಿದರು. ಪದವಿ ಪೂರ್ವ ಶಿಕ್ಷಣ ಇಲಾಖೆ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆಕೈಗೊಳ್ಳುವಯಾವುದೇಕಾರ್ಯಕ್ರಮಗಳಿಗೆ ತಮ್ಮ ಬೆಂಬಲ ಸದಾ ಇರುತ್ತದೆ ಎಂದು ತಿಳಿಸಿದರು. ವಿಜ್ಞಾನ ಶಾಲೆಯ ಶಿಕ್ಷಕಿ ಪೂಜಾ ಹಾಗೂ ಸಂಗಡಿಗರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮಕ್ಕೆ ಉಪನ್ಯಾಸಕ ಡಾ.ದಯಾನಂದ ಕಿನ್ನಾಳ್ ಸ್ವಾಗತ ಕೋರಿದರು, ಪ್ರಾಚಾರ್ಯರ ಸಂಘದ ಕಾರ್ಯದರ್ಶಿ ಅರವಿಂದ ಕುಲಕರ್ಣಿ ವಂದನೆ ಸಲ್ಲಿಸಿದರು. ಜಗದೀಶ್ ಚಂದ್ರ ಬೋಸ್ ನಿರೂಪಿಸಿದರು. ವಿವಿಧ ಕಾಲೇಜುಗಳ ಪ್ರಾಚಾರ್ಯರು, ಉಪನ್ಯಾಸಕರು, ನಿರ್ಣಾಯಕರು, ಕ್ರೀಡಾತಂಡಗಳ ಮುಖ್ಯಸ್ಥರು, ವಿವಿಧ ಜಿಲ್ಲೆಗಳಿಂದ ಬಂದ 500ಕ್ಕೂ ಹೆಚ್ಚು ಕ್ರೀಡಾಪಟುಗಳು ಉಪಸ್ಥಿತರಿದ್ದರು.

## ಭವಿಷ್ಯ ನಿಧಿ ನಿಮ್ಮ ಹತ್ತಿರಕ್ಕೆ

### ನಿಧಿ ಅಪ್ಕೆ ನಿಕಟ್ ಕಾರ್ಯಕ್ರಮ ಡಿ.27ರಂದು

■ **ಹಂಪಿ ಟೈಮ್ಸ್ ಬಳ್ಳಾರಿ**

ಕಾರ್ಮಿಕರ ಭವಿಷ್ಯ ನಿಧಿ ಸಂಸ್ಥೆಯ ಜಿಲ್ಲಾ ಪ್ರಾದೇಶಿಕ ಕಚೇರಿಯ ಉದ್ಯೋಗಿಗಳ ಭವಿಷ್ಯನಿಧಿ ಮತ್ತು ಪಿಂಚಣಿ ಇತ್ಯಾದಿಗಳಿಗೆ ಸಂಬಂಧಿಸಿದ ಕುಂದುಕೊರತೆಗಳನ್ನು ನಿವಾರಿಸಲು ಡಿಸೆಂಬರ್ 27ರಂದು ಬೆಳಿಗ್ಗೆ 9ರಿಂದ ಸಂಜೆ 6 ರವರೆಗೆ 'ನಿಧಿ ಆಪ್ಕೆ ನಿಕಟ್' ಕಾರ್ಯಕ್ರಮವನ್ನು ತೋರಣಗಲ್ಲಿನ ಐಟಿಎಂಎಸ್ ಲರ್ನಿಂಗ್ ಸೆಂಟರ್‌ನಲ್ಲಿ ಏರ್ಪಡಿಸಲಾಗಿದೆ.

ಈ ಕಾರ್ಯಕ್ರಮವು ಕಾರ್ಮಿಕರ, ಪಿಂಚಣಿದಾರರ ಮತ್ತು ಉದ್ಯೋಗದಾತರ ಕುಂದುಕೊರತೆ ಪರಿಹಾರ ಮತ್ತು ಮಾಹಿತಿ ವಿನಿಮಯಕ್ಕೆ ಅರಿವು ಮೂಡಿಸುವ ಕಾರ್ಯಕ್ರಮವಾಗಿದೆ.

ಉದ್ಯೋಗದಾತರ ಕರ್ತವ್ಯಗಳು, ಜವಾಬ್ದಾರಿಗಳ ಅರಿವು, ಕಾರ್ಮಿಕರಿಗೆ, ಉದ್ಯೋಗದಾತರಿಗೆ, ಪ್ರಧಾನ ಉದ್ಯೋಗ ದಾತರಿಗೆ ಮತ್ತು ಗುತ್ತಿಗೆದಾರರಿಗೆ ಲಭ್ಯವಿರುವ ಆನ್‌ಲೈನ್ ಸೇವೆಗಳ ಮಾಹಿತಿ, ಹೊಸ ಉಪಕ್ರಮಗಳು ಹಾಗೂ ಸುಧಾರಣೆಗಳ ಮಾಹಿತಿ ಒದಗಿಸುವುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ:08392–226304 ಗೆ ಸಂಪರ್ಕಿಸಬಹುದು ಎಂದು ಬಳ್ಳಾರಿ ಕ್ಷೇತ್ರಿಯ ಭವಿಷ್ಯನಿಧಿ ಆಯುಕ್ತ ಕೆ.ವೆಂಕಟ ಸುಬ್ಬಯ್ಯ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA